# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಸೋಮವಾರ, ನವೆಂಬರ್ 25, 2024

ಸಂಪುಟ : 51 ಸಂಚಿಕೆ : 192 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





## ಜನ್ಮ ದಿನದ ಶುಭಾಶಯಗಳು

HAPPY BIRTHDAY


ರಾಜ್ಯ ಬಿಜೆಪಿಯ ಹಿರಿಯ ನಾಯಕರೂ, ಹಿರಿಯ ಮುತ್ಸದ್ದಿಗಳೂ, ದಾವಣಗೆರೆ ಜಿಲ್ಲಾ ಮಾಜಿ ಉಸ್ತುವಾರಿ ಸಚಿವರೂ, ರೈತ ನಾಯಕರೂ, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಜನಪ್ರಿಯ ಮಾಜಿ ಶಾಸಕರೂ, ನಮ್ಮ ಮಾರ್ಗದರ್ಶಿಗಳೂ ಆಗಿರುವ

**ಸನ್ಮಾನ್ಯ ಶ್ರೀ ಎಸ್.ಎ. ರವೀಂದ್ರನಾಥ್** ಅವರಿಗೆ 79ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು

**ಜಿ. ಸುರೇಶ್ ಆವರಗೆರೆ,** ಮಾಜಿ ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.







## ನಾಗರಿಕ ಹಿತ ರಕ್ಷಣಾ ಸಮಿತಿ

ಪಿ.ಜೆ. ಬಡಾವಣೆ, ದಾವಣಗೆರೆ

ಪಿ.ಜೆ.ಬಡಾವಣೆಯ ನಾಗರಿಕರ ಮನವಿಗೆ ಸ್ಪಂದಿಸಿ, ತ್ವರಿತಗತಿಯಲ್ಲಿ ಪಿ.ಜೆ.ಬಡಾವಣೆಯ ಆಸ್ತಿಯನ್ನು ನಮಗೆ ಉಳಿಸಿಕೊಟ್ಟ ಧೀಮಂತ ನಾಯಕರಿಗೆ ಹೃದಯಪೂರ್ವಕ ಅಭಿನಂದನೆಗಳು.



**ಹೃದಯಪೂರ್ವಕ ಅಭಿನಂದನೆಗಳು.**

ದಾವಣಗೆರೆ ನಗರದ ಪಿ.ಜೆ. ಬಡಾವಣೆಯು ವಕ್ಫ್ ಆಸ್ತಿಯಲ್ಲ, ಸರ್ಕಾರಿ ಖರಾಬು ಎಂದು ಪಹಣಿಯಲ್ಲಿ ತಿದ್ದುಪಡಿ ಮಾಡಿದ್ದು, ಇದಕ್ಕೆ ಕಾರಣರಾದ ಸಚಿವ **ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್** ಮತ್ತು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ **ಶ್ರೀ ದಿನೇಶ್ ಕೆ.ಶೆಟ್ಟಿ** ಅವರಿಗೆ ಪಿ.ಜೆ. ಬಡಾವಣೆ ನಾಗರಿಕ ಹಿತ ರಕ್ಷಣಾ ಸಮಿತಿ ವತಿಯಿಂದ ಹೃದಯಪೂರ್ವಕ ಅಭಿನಂದನೆಗಳು.


• ಸಂದೀಪ್ ಜೈನ್ • ನಾಕೋಡ ಸುರೇಶ್ • ಮಹೇಂದ್ರ ಕುಮಾರ್ • ವಿಜಯ್ ಜೈನ್ • ಕಾಸಲ್ ಬದ್ರಿನಾಥ್ • ಉತ್ತಮ್ ಜೈನ್ • ನಿರಂಜನ್ • ನಿಶಾನಿಮತ್ • ಜೈನ್ ರಾಜ್ • ಹೆಚ್.ವಿ. ರಾಮದಾಸ್ • ಪ್ರಭು ಐಗೂರು • ರಾಜು ಭಂಡಾರಿ • ಶ್ರೀಕಾಂತ್ ಬಗರೆ



**ಮಧು ಪವಾರ್**
ಅಧ್ಯಕ್ಷರು,
17ನೇ ವಾರ್ಡ್,
ಪಿ.ಜೆ. ಬಡಾವಣೆ, ದಾವಣಗೆರೆ


## ಪಿ.ಜೆ.ಬಡಾವಣೆ ವಕ್ಫ್ ಆಸ್ತಿಯಲ್ಲ, ಸರ್ಕಾರದ ದಾಖಲೆಯಲ್ಲಿ ತಿದ್ದುಪಡಿ

ದಾವಣಗೆರೆ, ನ.24- ನಗರದ ಪಿ.ಜೆ.ಬಡಾವಣೆ ವಕ್ಫ್ ಆಸ್ತಿಯಲ್ಲ, ಸರ್ಕಾರಿ ಖರಾಬು ಎಂದು ಪಹಣಿಯಲ್ಲಿ ತಿದ್ದುಪಡಿ ಮಾಡಿದ್ದು, ಸ್ಥಳೀಯ ನಾಗರಿಕರು ಇದಕ್ಕೆ ಕಾರಣರಾದ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಅವರನ್ನು ಅಭಿನಂದಿಸಿದ್ದಾರೆ.



**ನಾಗರಿಕರ ಹರ್ಷೋದ್ಗಾರ: ಸಚಿವ ಮಲ್ಲಿಕಾರ್ಜುನ್, ದಿನೇಶ್ ಶೆಟ್ಟಿಗೆ ಅಭಿನಂದನೆ**

2008ರಲ್ಲಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಅವರು ಅಂದಿನ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅನ್ವರ್ ಮಾಣಿಪಾಡಿ ಮೂಲಕ ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ 2012ರಲ್ಲಿ ಅಂದಿನ ಮುಖ್ಯಮಂತ್ರಿ ಸದಾನಂದಗೌಡ ಅವರಿಗೆ ವರದಿ ನೀಡಿತ್ತು. ಈ ವರದಿ ಆಧಾರಿಸಿ ಸದಾನಂದ ಗೌಡ ಅವರು ರಾಜ್ಯದಲ್ಲಿ 27 ಸಾವಿರ ಎಕರೆ ಜಮೀನು ವಕ್ಫ್ ಆಸ್ತಿ ಆಗಿದ್ದು, ಅದನ್ನು ವಾಪಸ್ ಪಡೆಯಲಾಗುವುದು ಎಂದು ಹೇಳಿಕೆ ನೀಡಿದ್ದರು. (4ನೇ ಪುಟಕ್ಕೆ)

## ನಾಗರಿಕ ಸೇವಾ ಹುದ್ದೆಗಳಿಗೆ ನೇರ ಗುತ್ತಿಗೆ ನೇಮಕ

**ಸಂಸತ್ ಸಮಿತಿಯ ಪರಿಶೀಲನೆ**

ನವದೆಹಲಿ, ನ. 24 – ನಾಗರಿಕ ಸೇವೆ ಹುದ್ದೆಗಳಿಗೆ ವಿವಿಧ ವಲಯಗಳ ಪರಿಣಿತರನ್ನು ಗುತ್ತಿಗೆ ಆಧಾರದ ಮೇಲೆ ನೇರವಾಗಿ ನೇಮಿಸುವ ಕುರಿತ ವಿಷಯವನ್ನು ಸಂಸತ್ ಸಮಿತಿ ಪರಿಶೀಲಿಸಲಿದೆ. ಈ ಹುದ್ದೆಗಳಲ್ಲೂ ಮೀಸಲಾತಿ ಕಲ್ಪಿಸಬೇಕು ಎಂಬ ಬೇಡಿಕೆ ಕೇಳಿ ಬಂದಿತ್ತು.

ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ 45 ಜಂಟಿ ಕಾರ್ಯದರ್ಶಿ, ನಿರ್ದೇಶಕ ಹಾಗೂ ಉಪ ಕಾರ್ಯದರ್ಶಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇರವಾಗಿ ನೇಮಿಸುವ ಬಗ್ಗೆ ಯು.ಪಿ.ಎಸ್.ಸಿ. ಪ್ರಕಟಣೆ ಹೊರಡಿಸಿತ್ತು. ಪ್ರತಿಪಕ್ಷಗಳಷ್ಟೇ ಅಲ್ಲದೇ, ಎನ್.ಡಿ.ಎ. ಮಿತ್ರ ಪಕ್ಷಗಳಾದ ಎಲ್.ಜೆ.ಪಿ. ಹಾಗೂ ಜೆಡಿಯು ಸಹ ಇದನ್ನು (4ನೇ ಪುಟಕ್ಕೆ)


## ಅಭಿನಂದನೆಗಳು



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ದಾವಣಗೆರೆ ಜಿಲ್ಲಾ ಘಟಕದ ಉಪಾಧ್ಯಕ್ಷರು, ಎಸ್.ಜೆ.ಪಿ.ವಿ. ವಿದ್ಯಾಪೀಠದ ಕಾರ್ಯದರ್ಶಿಗಳೂ ಆದ

**ಶ್ರೀ ಆರ್.ಟಿ.ಪ್ರಶಾಂತ್ ದುಗ್ಗತ್ತಿಮಠ**

ಇವರನ್ನು ಕರ್ನಾಟಕ ಸರ್ಕಾರದಿಂದ **ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರನ್ನಾಗಿ** ನಾಮನಿರ್ದೇಶನ ಮಾಡಲಾಗಿದ್ದು, ಇವರಿಗೆ ನಮ್ಮ ಹೃದಯಪೂರ್ವಕ ಅಭಿನಂದನೆಗಳು....

**ಶ್ರೀ ಶೌರ್ಯ ಎಂಟರ್ ಪ್ರೈಸಸ್, ದಾವಣಗೆರೆ.**

**ಪ್ರಶಾಂತ್ ಕುಮಾರ್, ಮಂಜು ಎಸ್. ಹಾಗೂ ಆರ್.ಟಿ. ಪ್ರಶಾಂತ್ ಸ್ನೇಹಿತರ ಬಳಗ**







## ಜನ್ಮ ದಿನದ ಹಾರ್ದಿಕ ಶುಭಾಶಯಗಳು

ಬಿಜೆಪಿ ಹಿರಿಯ ಮುತ್ಸದಿ ರಾಜಕಾರಣಿಗಳು, ಮಾಜಿ ಉಸ್ತುವಾರಿ ಸಚಿವರು, ನಮ್ಮೆಲ್ಲರ ಮಾರ್ಗದರ್ಶಕರು ಹಾಗೂ ಜನಮೆಚ್ಚಿದ ಮಾಜಿ ಶಾಸಕರು ಆದ

**ಸನ್ಮಾನ್ಯ ಶ್ರೀ ಎಸ್.ಎ.ರವೀಂದ್ರನಾಥ್** ಅವರಿಗೆ

**79ನೇ ಜನ್ಮದಿನದ ಶುಭಾಶಯಗಳು**

ವಿ.ಸೂ: ದಿನಾಂಕ:26-11-2024ನೇ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಶ್ರೀಮತಿ ಸುಧಾ ವೀರೇಂದ್ರ ಪಾಟೀಲ್ ಕಲ್ಯಾಣ ಮಂಟಪದಲ್ಲಿ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪ ಇವರ ನೇತೃತ್ವದಲ್ಲಿ ಹುಟ್ಟುಹಬ್ಬ ಕಾರ್ಯಕ್ರಮ ಜರುಗಲಿದೆ.





ಶುಭ ಕೋರುವವರು **ಶ್ರೀ ಡಿ.ವಿ. ಜಯರುದ್ರಪ್ಪ** ಮಾಜಿ ಸದಸ್ಯರು, ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಎಸ್.ಎ.ಆರ್ ಅಭಿಮಾನಿ ಬಳಗ





॥ ಶ್ರೀ ಹರಿಹರ ಲಿಂಗೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ

ಕಕ್ಕರಗೊಳ್ಳದ ದಿ. ಶ್ರೀಮತಿ ಚನ್ನಬಸಮ್ಮ ದಿ. ಶ್ರೀ ಭರಮಪ್ಪ ಇವರ ಮಗನಾದ
ದಾವಣಗೆರೆ ತಾಲ್ಲೂಕು ಶಾಮನೂರು ಗ್ರಾಮದ ವಾಸಿ

**ದಿ. ಕಕ್ಕರಗೊಳ್ಳದ ಶ್ರೀ ಕೆ.ಹೆಚ್. ಹಿಮಂತರಾಜು**

(ಮಾಜಿ ನಗರ ಸಭಾ ಸದಸ್ಯರು, ದಾವಣಗೆರೆ)

ಇವರ ಧರ್ಮಪತ್ನಿ **ಶ್ರೀಮತಿ ಕೆ.ಹೆಚ್, ಸಾವಿತ್ರಮ್ಮ** ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 18.11.2024ನೇ ಸೋಮವಾರ ಬೆಳಿಗ್ಗೆ 8.30 ಗಂಟೆಗೆ ನನ್ನ ಪೂಜ್ಯ ಪತಿಯವರಾದ

**ಕಕ್ಕರಗೊಳ್ಳದ ಶ್ರೀ ಹೆಚ್. ಹಿಮಂತರಾಜು**

(ಮಾಜಿ ನಗರ ಸಭಾ ಸದಸ್ಯರು, ದಾವಣಗೆರೆ)

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆ"ಯನ್ನು**

ದಿನಾಂಕ : 26.11.2024 ನೇ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ

ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪ, ಶಾಮನೂರು ಇಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ದಿ. ಕಕ್ಕರಗೊಳ್ಳದ ಶ್ರೀ ಕೆ.ಹೆಚ್. ಹಿಮಂತರಾಜು ಇವರ ಧರ್ಮಪತ್ನಿ
ಶ್ರೀಮತಿ ಕೆ.ಹೆಚ್. ಸಾವಿತ್ರಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು.
ಶ್ರೀಮತಿ ಶಾರದಮ್ಮ, ದಿ. ಶ್ರೀ ರಾಜಪ್ಪ ಮತ್ತು ಮಕ್ಕಳು, ಮೃತರ ಸಹೋದರಿಯರು ಮತ್ತು ಮಕ್ಕಳು
ಹರಿಯಪ್ಪ ವಂಶಸ್ಥರು, ಕಕ್ಕರಗೊಳ್ಳ, ಶಾಮನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
ಮೊ : 97414 65572, 96200 91896

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



## ಸತ್ಯವನ್ನೇ ಹೇಳುತ್ತೇನೆ

ಭಾರತ ವಿಕಾಸ ಪರಿಷದ್, ಸ್ವಾಮಿ ವಿವೇಕಾನಂದ ಶಾಖೆ ಮತ್ತು ರಂಗಭೂಮಿ ಟ್ರಸ್ಟ್ ಕೊಡಗು ಸಹಯೋಗದಲ್ಲಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ರಚಿಸಿ, ನಿರ್ದೇಶಿಸಿರುವ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಪ್ರದರ್ಶನವು ಚಿಂದೋಡಿ ಲೀಲಾ ರಂಗ ಮಂದಿರದಲ್ಲಿ ಭಾನುವಾರ ಸಂಜೆ ನಡೆಯಿತು.

## ನಗರದ 17 ಕೇಂದ್ರಗಳಲ್ಲಿ ಕೆ-ಸೆಟ್ ಪರೀಕ್ಷೆ ಯಶಸ್ವಿ

ದಾವಣಗೆರೆ, ನ. 24- ನಗರದ 17 ಕೇಂದ್ರಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಡೆಸಲಾಗುತ್ತಿರುವ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ-ಸೆಟ್) ಭಾನುವಾರ ಯಶಸ್ವಿಯಾಗಿ ನಡೆಯಿತು. ಪರೀಕ್ಷೆಗೆ ನೋಂದಣಿಯಾಗಿದ್ದ 7304 ಅಭ್ಯರ್ಥಿಗಳ ಪೈಕಿ 6244 ಜನರು ಪರೀಕ್ಷೆ ಬರೆದು, 1060 ಜನರು ಗೈರು ಹಾಜರಾಗಿದ್ದರು.

ಬೆಳಿಗ್ಗೆ 10 ರಿಂದ 1 ಗಂಟೆವರೆಗೂ ಪರೀಕ್ಷೆ ನಡೆಯಿತು. ಯಾವುದೇ ಅಕ್ರಮ ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು.





ಕೆ-ಸೆಟ್ ಪರೀಕ್ಷೆ ಬರೆಯಲು ಆಗಮಿಸಿದ್ದ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದ ಹೊರಗೆ ನೋಂದಣಿ ಸಂಖ್ಯೆ ಪರಿಶೀಲಿಸುತ್ತಿರುವುದು. ಅಭ್ಯರ್ಥಿಯೊಬ್ಬರು ಬೆಂಡೋಲೆ ತೆಗೆಯುತ್ತಿರುವುದು (ಬಲಚಿತ್ರ)

## ಸಂಕ್ಷಿಪ್ತ ಸುದ್ದಿ

**ಮಹಾರಾಷ್ಟ್ರ ಮುಖ್ಯಮಂತ್ರಿ ಬಗ್ಗೆ ವರಿಷ್ಠರ ನಿರ್ಧಾರ : ಬವಂಕುಲೆ**

ಮುಂಬೈ : ಮಹಾರಾಷ್ಟ್ರದ ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಎನ್.ಡಿ.ಎ. ಮೈತ್ರಿಕೂಟದ ಮುಖಂಡರು ಹಾಗೂ ಬಿಜೆಪಿ ವರಿಷ್ಠರು ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಚಂದ್ರಶೇಖರ ಬವಂಕುಲೆ ತಿಳಿಸಿದ್ದಾರೆ.

**ಶಿಂದೆ ಮುಖ್ಯಮಂತ್ರಿಯಾಗಿ ಮುಂದುವರೆಯಲಿ : ದೀಪಕ್ ಕೇಸರ್ಕರ್**

ಮುಂಬೈ : ಏಕನಾಥ ಶಿಂದೆ ಅವರು ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎಂಬ ಭಾವನೆ ಶಿವಸೇನೆ ಶಾಸಕರಲ್ಲಿದೆ ಎಂದು ಸಚಿವ ಹಾಗೂ ಶಿವಸೇನೆ ನಾಯಕ ದೀಪಕ್ ಕೇಸರ್ಕರ್ ಹೇಳಿದ್ದಾರೆ.

**ಮುಂಬೈನಲ್ಲಿ ಶಿವಸೇನೆ ಶಾಸಕರ ಸಭೆ**

ಮುಂಬೈ : ನೂತನವಾಗಿ ಚುನಾಯಿತರಾಗಿರುವ ಶಿವಸೇನೆಯ ಶಾಸಕರು ಮುಂಬೈನಲ್ಲಿ ಸಭೆ ನಡೆಸಿದ್ದು, ಮುಂದಿನ ಸರ್ಕಾರ ರಚನೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ಅಧಿಕಾರ ನೀಡಿದ್ದಾರೆ. ಶಿಂದೆ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ.

**ಪ್ರಕರಣಗಳ ಮೇಲೆ ಸಾಮಾಜಿಕ ಜಾಲತಾಣಗಳಿಂದ ಒತ್ತಡ : ಮಾಜಿ ಸಿಜೆಐ ಚಂದ್ರಚೂಡ್**

ನವದೆಹಲಿ : ವಿಶೇಷ ಹಿತಾಸಕ್ತ ಗುಂಪುಗಳು ಪ್ರಕರಣಗಳ ಫಲಿತಾಂಶದ ಮೇಲೆ ಒತ್ತಡ ಹೇರಲು ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಳ್ಳುತ್ತಿವೆ. ಈ ಬಗ್ಗೆ ನ್ಯಾಯಾಧೀಶರು ಎಚ್ಚರಿಕೆ ವಹಿಸಬೇಕು ಎಂದು ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.

**ಅದಾನಿಗೆ ಸಮನ್ಸ್ ಕಳಿಸಲು ಎಸ್.ಇ.ಸಿ.ಗೆ ಅಧಿಕಾರವಿಲ್ಲ**

ನ್ಯೂಯಾರ್ಕ್ : ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಉದ್ಯಮಿ ಗೌತಮ್ ಅದಾನಿ ಅವರಿಗೆ ನೇರವಾಗಿ ಸಮನ್ಸ್ ಕಳಿಸಲು ಅಮೆರಿಕದ ಎಸ್.ಇ.ಸಿ.ಗೆ ಅಧಿಕಾರ ಇಲ್ಲ. ರಾಯಬಾರಿ ಮಾರ್ಗಗಳ ಮೂಲಕ ಕ್ರಮ ತೆಗೆದುಕೊಳ್ಳಬೇಕಿದೆ ಎಂದು ಮೂಲಗಳು ತಿಳಿಸಿವೆ.

**ಇಂಧನ ಯೋಜನೆಗಳ ಬಗ್ಗೆ ಬಾಂಗ್ಲಾ ಪರಿಶೀಲನೆ**

ಢಾಕಾ : ಭಾರತದ ಜೊತೆಗಿನ ವಿದ್ಯುತ್ ಯೋಜನೆಗಳ ಬಗ್ಗೆ ಪರಿಶೀಲನೆ ನಡೆಸಲು ಬಾಂಗ್ಲಾದೇಶದ ಹಂಗಾಮಿ ಸರ್ಕಾರ ಸಮಿತಿಯೊಂದನ್ನು ರಚಿಸಿದೆ. ಅದಾನಿ ಸಮೂಹದ ಯೋಜನೆ ಸೇರಿದಂತೆ ಹಲವು ಯೋಜನೆಗಳನ್ನು ಸಮಿತಿ ಪರಿಶೀಲಿಸಲಿದೆ.

**ಸರ್ಕಾರ ರಚಿಸಲು ರಾಜ್ಯಪಾಲರ ಭೇಟಿ ಮಾಡಿದ ಹೇಮಂತ್ ಸೊರೇನ್**

ರಾಂಚಿ : ಜಾರ್ಖಂಡ್‌ನಲ್ಲಿ ಸರ್ಕಾರ ರಚಿಸಲು ಜೆ.ಎಂ.ಎಂ. ನಾಯಕ ಹೇಮಂತ್ ಸೊರೇನ್ ಅವರು ರಾಜ್ಯಪಾಲ ಸಂತೋಷ್ ಕುಮಾರ್ ಗಂಗ್ವಾರ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ್ದಾರೆ. ಇದಕ್ಕೂ ಮುಂಚೆ ನಡೆದ ಐ.ಎನ್.ಡಿ.ಐ.ಎ. ಸಭೆಯಲ್ಲಿ ಸೊರೇನ್ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಲಾಗಿತ್ತು.

**ಛತ್ತೀಸ್‌ಘಡದ ಸುಕ್ಮಾದಲ್ಲಿ ಸ್ಫೋಟ, ಪೊಲೀಸ್‌ಗೆ ಗಾಯ**

ಸುಕ್ಮ (ಛತ್ತೀಸ್‌ಘಡ) : ಛತ್ತೀಸ್‌ಘಡದ ಸುಕ್ಮ ಜಿಲ್ಲೆಯಲ್ಲಿ ನಕ್ಸಲರು ನಡೆಸಿದ ಸ್ಫೋಟದಲ್ಲಿ ಜಿಲ್ಲಾ ಮೀಸಲು ಪಡೆಯ ಪೇದೆಯೊಬ್ಬರು ಗಾಯಗೊಂಡಿದ್ದಾರೆ.

**ನಕ್ಸಲ್ ಪೀಡಿತ ಪ್ರದೇಶದಲ್ಲಿ ಸಿ.ಆರ್.ಪಿ.ಎಫ್.ನ ಮೂರು ನೆಲೆ ಸ್ಥಾಪನೆ**

ರಾಯಪುರ : ಛತ್ತೀಸ್‌ಘಡದ ನಕ್ಸಲ್ ಪೀಡಿತ ಬಸ್ತಾರ್ ಪ್ರದೇಶದಲ್ಲಿ ಸಿ.ಆರ್.ಪಿ.ಎಫ್. ಮೂರು ಹೊಸ ಮುಂಚೂಣಿ ನೆಲೆಗಳನ್ನು ಸ್ಥಾಪಿಸಿದೆ. ನಕ್ಸಲ್ ವಿರೋಧಿ ಕಾರ್ಯಾಚರಣೆ ತೀವ್ರಗೊಳಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

# ನಗರದ ಮಹಾರಾಜ ಪೇಟೆ ವಿಠ್ಠಲ ಮಂದಿರದಲ್ಲಿ ಇಂದಿನಿಂದ ದಿಂಡಿ ಉತ್ಸವ

ಮಹಾರಾಜ ಪೇಟೆ ವಿಠ್ಠಲ ಮಂದಿರ ದಲ್ಲಿ ಇಂದಿನಿಂದ ನಾಲ್ಕು ದಿನಗಳ ಕಾಲ ಶ್ರೀ ವಿಠ್ಠಲ ರುಖುಮಾಯಿ ದೇವರ ಮತ್ತು ಶ್ರೀ ಸಂತ ಜ್ಞಾನೇಶ್ವರ ಮಹಾರಾಜ ಸಂಜೀವಿನಿ ಸಮಾಧಿ ಸೋಹಳ ಮಹೋತ್ಸವ ನಡೆಯಲಿದ್ದು, ಇಂದು ಸಂಜೆ 5ಕ್ಕೆ ಪೋತಿ ಸ್ಥಾಪನೆ, ನಗರ ಪ್ರದಕ್ಷಿಣೆ, ಧ್ವಜ ಪೂಜೆ, ರಾತ್ರಿ 8 ಕ್ಕೆ ಸುನಿಲ್ ಜಮಖಂಡಿ ಕೀರ್ತನೆ, ಅಖಂಡ ವೀಣಾ ಜಾಗರಣೆ ಇರುತ್ತದೆ.

ನಾಳೆ ಮಂಗಳವಾರ ಏಕಾದಶಿ, ಬೆಳಿಗ್ಗೆ ಅಭಿಷೇಕ ಕಾಕಡಾರತಿ ಭಜನೆ. 7ಕ್ಕೆ ಶ್ರೀ ಜ್ಞಾನೇಶ್ವರ (ಭಗವದ್ಗೀತೆ) ಪಾರಾಯಣ 9 ಮತ್ತು 12 ನೇ ಅಧ್ಯಾಯ ನಂತರ ನಾಮಜಪ ಪ್ರವಚನದ ನಂತರ ಭಾವಸಾರ ವಿಜನ್ ಇವರಿಂದ ಭಜನೆ. ಸಂಜೆ 5 ಕ್ಕೆ ರುಖುಮಾಯಿ ಮಹಿಳಾ ಮಂಡಳಿ ಭಜನಾ ಕಾರ್ಯಕ್ರಮ. 6 ಕ್ಕೆ ರಥೋತ್ಸವ, ಶೋಭಾಯಾತ್ರೆ, ಭಜನೆಯೊಂದಿಗೆ ತರುಣ ಮಂಡಳ ಸ್ಯಾಬ್ಲೋ ಇರುತ್ತದೆ. ರಾತ್ರಿ 10 ಕ್ಕೆ



ಕೀರ್ತನೆ ಪ್ರಭಾಕರ್ ದಾದಾ ಬುವಾ ಬೋಧಲೆ ಮಹಾರಾಜ ಸಾ॥ ಪಂಡರಪುರ ಇವರಿಂದ ರಾತ್ರಿ 12 ಕ್ಕೆ ಭಾರೂಢ ಅಖಂಡ ವೀಣಾ ಜಾಗರಣೆ.

ದಿನಾಂಕ 27 ರ ಬುಧವಾರ ದ್ವಾದಶಿ ನಿಮಿತ್ತ್ಯ ಬೆಳಿಗ್ಗೆ 05ಕ್ಕೆ ಕಾಕಡಾರತಿ, ಭಜನೆ, ಪಾರಾಯಣ, ಹರಿಪಾಠ, 9 ಕ್ಕೆ ರಥೋತ್ಸವ, ದಿಂಡಿ ಉತ್ಸವ, 12 ಕ್ಕೆ ಶ್ರೀ ಸಂತ ಪೂಜಾ, 12.30 ಕ್ಕೆ ಕಲಾವತಿ ಮಹಿಳಾ ಮಂಡಳಿ ಇವರಿಂದ ಪಾವುಲ್ ಭಜನೆ, ಮಹಾಮಂಗಳಾರತಿ 1.15 ಕ್ಕೆ ಅಭಿನಂದನಾ ಕಾರ್ಯಕ್ರಮ, ಶ್ರೀ ಸಂತ ಸಮಾರಾಧನೆ.

ದಿನಾಂಕ 28 ರ ಗುರುವಾರ ತ್ರಯೋದಶಿ ಶ್ರೀ ಜ್ಞಾನೇಶ್ವರಿ ಮಹಾರಾಜ ಸಮಾಧಿ ಸೋಹಳ ಕಾರ್ಯಕ್ರಮ, ಬೆಳಗ್ಗೆ 10 ಕ್ಕೆ ಶ್ರೀ ಪ್ರಭಾಕರ್ ಬುವಾ ಬೋಧಲೆ ಮಹಾರಾಜ್ ಇವರಿಂದ ಗುಲಾಲ್ ಕೀರ್ತನೆ, ಮಧ್ಯಾಹ್ನ 12:30 ಕ್ಕೆ ಗುಲಾಲ್ ಪುಷ್ಪವೃಷ್ಟಿ ಶ್ರೀ ಸಂತ ಸಮಾರಾಧನೆ ಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಗಲಿದೆ.

ಭಕ್ತಾದಿಗಳು ಭಾಗವಹಿಸುವಂತೆ ದೈವ ಮಂಡಳಿ ಅಧ್ಯಕ್ಷ ಎಂ.ಎನ್. ರಘು ಮುಸಳೆ, ಕಾರ್ಯದರ್ಶಿ ಈಶ್ವರ್ ರಾವ್ ಎನ್. ಗುಜ್ಜರ್, ಭಜನಾ ಮಂಡಳಿ ಪ್ರಮುಖರಾದ ಚಂದ್ರಕಾಂತ ಎಸ್. ವಾದೋನಿ, ವಿನಯ್ ಜಿಂಗಾಡೆ, ಭಜನಾ ಮಂಡಳಿ ಅಧ್ಯಕ್ಷ ನಿಂಗಸ್ವಾಮಿ ರಾವ್ ಖಮಿತ್ಕರ್ ಕೋರಿದ್ದಾರೆ.

## ಬಿ.ಎ ವಿದ್ಯಾರ್ಥಿಗಳಿಗೆ ಸ್ವಾಗತ - ಪ್ರತಿಭಾ ಪುರಸ್ಕಾರ ಸಮಾರಂಭ



ಮಲೇಬೆನ್ನೂರು, ನ.24- ಇಲ್ಲಿನ ಶ್ರೀ ಬೀರಲಿಂಗೇಶ್ವರ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಈಚೆಗೆ ಬಿ.ಎ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಿತು.

ವಿನಾಯಕ ಹಳೇ ವಿದ್ಯಾರ್ಥಿಗಳ ವಿದ್ಯಾವರ್ಧಕ ಸಂಘದಿಂದ ಬಿ.ಎ. ಪದವಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿಯರಾದ ಜೆ.ಯು. ರಾಧಿಕಾ ಮತ್ತು ಜಿ.ಪಿ. ಪೂರ್ಣಿಮಾ ಅವರಿಗೆ 'ನೆನಪಿನ ಕಾಣಿಕೆ' ನೀಡಲಾಯಿತು.

ಈ ವೇಳೆ ಪ್ರಾಚಾರ್ಯ ರಾಜಪ್ಪ, ಮಹಮ್ಮದ್ ಖಾನ್, ಸಂಸ್ಥೆಯ ಗೌರವಾಧ್ಯಕ್ಷ ರೇವಣಪ್ಪ, ಉಪಾಧ್ಯಕ ನಾಗೇಂದ್ರಪ್ಪ, ಸದಸ್ಯ ನಿಂಗಪ್ಪ, ಸಂಘದ ಸದಸ್ಯರಾದ ಆರ್. ಕೆ. ಲಿಂಗರಾಜ್, ರಾಜಕುಮಾರ, ಶರಣಪ್ಪ, ಉಪನ್ಯಾಸಕರಾದ ತಿಪ್ಪಣ್ಣ, ಉಮಾದೇವಿ, ಸುರೇಶ, ಅಶ್ವಿನಿ, ರೇಣುಕ, ಪ್ರಭು, ದರ್ಶನ್ ಹಾಗೂ ಕಾಲೇಜಿನ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿದ್ದರು.

## ಮಲೇಬೆನ್ನೂರಿನಲ್ಲಿಂದು ಕನಕ ಜಯಂತಿ



ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಸಂಘದ ವತಿಯಿಂದ ದಾಸಶ್ರೇಷ್ಠ ಭಕ್ತ ಕನಕದಾಸರ 537ನೇ ಜಯಂತ್ಯೋತ್ಸವ ವನ್ನು ಇಂದು ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದೆ. ಹೊರ ಬೀರಪ್ಪನ ದೇವಸ್ಥಾನದ ಆವರಣ ದಲ್ಲಿ ಮಧ್ಯಾಹ್ನ 12 ರಿಂದ ಅನ್ನ ಸಂತರ್ಪಣೆ ಏರ್ಪಡಿ ಸಿದ್ದು, ಸಾಯಂಕಾಲ 4 ಗಂಟೆಯಿಂದ ಧ್ವನಿವರ್ಧಕ ದೊಂದಿಗೆ ಕನಕದಾಸರ ಪ್ರತಿಮೆಯ ಮೆರವಣಿಗೆ ನಡೆಯಲಿದೆ.

## ಹೊಸ ಬೆಳವನೂರಿನಲ್ಲಿ ಇಂದು ಶ್ರೀ ಗಣೇಶ ಕಾರ್ತಿಕೋತ್ಸವ

ದಾವಣಗೆರೆ ತಾಲ್ಲೂಕಿನ ಹೊಸ ಬೆಳವನೂರು ಗ್ರಾಮದಲ್ಲಿ ಶ್ರೀ ಬಸವೇಶ್ವರ ಸಮುದಾಯ ಭವನದ ಆವರಣದಲ್ಲಿ ಇಂದು ಸಂಜೆ 6 ಕ್ಕೆ ಶ್ರೀ ಗಣೇಶ ಕಾರ್ತಿಕೋತ್ಸವ ಹಾಗೂ ಗ್ರಾಮದ 80 ವರ್ಷ ತುಂಬಿದ ಹಿರಿಯ ನಾಗರಿಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ.

ಎಸ್.ಬಿ. ಪ್ರಭಾಕರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಆಗಮಿಸುವರು ಎಂದು ಮಲ್ಲಿಕಾರ್ಜುನ ಎಂ.ಎಸ್. ಹಾಗೂ ಮಹೇಂದ್ರ ಬಿ.ಕೆ. ತಿಳಿಸಿದ್ದಾರೆ.

# ಸಂವಿಧಾನಕ್ಕೆ 75 ವರ್ಷ 26ಕ್ಕೆ ಹಳೆ ಸಂಸತ್ ಭವನದಲ್ಲಿ ಸಮಾರಂಭ

ನವದೆಹಲಿ, ನ. 24 – ಸಂವಿಧಾನ ರಚನಾ ಸಭೆಯು ಸಂವಿಧಾನ ಅಂಗೀಕರಿಸಿ 75 ವರ್ಷ ತುಂಬುವ ಸಮಾರಂಭವನ್ನು ಹಳೆಯ ಸಂಸತ್ ಭವನದಲ್ಲಿ ನವೆಂಬರ್ 26ರಂದು ಆಚರಿಸಲಾಗುವುದು. ಸಭೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾಗಹಿಸಲಿದ್ದಾರೆ.

ಹಳೆ ಸಂಸತ್ ಭವನದ ಸಂವಿಧಾನ ಭವನದ ಕೇಂದ್ರ ಹಾಲ್‌ನಲ್ಲಿ ಈ ಸಮಾರಂಭ ನಡೆಸಲಾಗುವುದು. ಇದೇ ಸದನದಲ್ಲಿ ನವೆಂಬರ್ 26, 1949ರಲ್ಲಿ ಸಂವಿಧಾನ ಅಂಗೀಕರಿಸಲಾಗಿತ್ತು. ಜನವರಿ 26, 1950ರಲ್ಲಿ ಸಂವಿಧಾನದ ಜಾರಿಗೆ ಬಂದಿತ್ತು.

ಈ ಸಂದರ್ಭದಲ್ಲಿ ನಾಣ್ಯ ಹಾಗೂ ಅಂಚೆ ಚೀಟಿಯೊಂದನ್ನು ಬಿಡುಗಡೆ ಮಾಡಲಾಗುವುದು. ಸಂಸ್ಕೃತ ಹಾಗೂ ಮೈಥಿಲಿ ಭಾಷೆಗಳ ಸಂವಿಧಾನ ಪ್ರತಿಗಳನ್ನೂ ಬಿಡುಗಡೆ ಮಾಡಲಾಗುವುದು. ಸಂವಿಧಾನ ಕುರಿತ ಎರಡು ಪುಸ್ತಕಗಳು ಹಾಗೂ ಕಿರುಹೊತ್ತಿಗೆಯೊಂದನ್ನೂ ಬಿಡುಗಡೆ ಮಾಡಲಾಗುವುದು.

## ಶ್ರೀನಿವಾಸನಗರ ಕ್ಯಾಂಪ್ : ಸ್ಕೂಲ್ ಬ್ಯಾಗ್, ನೋಟ್ ಪುಸ್ತಕ ವಿತರಣೆ



ಮಲೇಬೆನ್ನೂರು, ನ. 23 - ಶ್ರೀನಿವಾಸನಗರ ಕ್ಯಾಂಪ್‌ನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಶನಿವಾರ ಬೆಂಗಳೂರಿನ ಉದ್ಯಮಿ ಶ್ರೀಮತಿ ಸಾವಿತ್ರಮ್ಮ ಮಂಜುನಾಥ್ ಇವರು ಶಾಲಾ ಬ್ಯಾಗ್ ಹಾಗೂ ನೋಟ್ ಪುಸ್ತಕಗಳನ್ನು ವಿತರಿಸಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಎಸ್.ಡಿ.ಎಮ್.ಸಿ. ಅಧ್ಯಕ್ಷ ಅಂಜನಪ್ಪ, ಉಪಾಧ್ಯಕ್ಷ ಪಾಲಾಕ್ಷಪ್ಪ, ಸದಸ್ಯ ಗಣೇಶ್, ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾ, ಅಧ್ಯಕ್ಷ ಕೆ.ಟಿ. ಮಂಜಪ್ಪ , ಶಾಲೆಯ ಮುಖ್ಯ ಶಿಕ್ಷಕ ಮಹಮದ್ ಹಾರೂನ್, ಸಹ ಶಿಕ್ಷಕ ನೂರುಲ್ಲಾ, ಶ್ರೀ ಲಕ್ಷ್ಮಿ ವೆಂಕಟೇಶ್ವರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಮಂಜುನಾಥ್ ಕಡೇಮನಿ, ಕೆ.ಆರ್. ದಿವಾಕರ್ ಭಾಗವಹಿಸಿದ್ದರು.

## ಹರಿಹರ ಊರಮ್ಮದೇವಿ ಕಾರ್ತಿಕೋತ್ಸವ



ಹರಿಹರ, ನ. 24- ನಗರದ ಹೊಸಭರಂಪುರ ಬಡಾವಣೆಯಲ್ಲಿರುವ ಗ್ರಾಮದೇವತೆ ಊರಮ್ಮ ದೇವಿ ಕಾರ್ತಿಕೋತ್ಸವ ನಡೆಯಿತು.ಪ್ರಧಾನ ಅರ್ಚಕ ನಾಗರಾಜ ವಿಶೇಷ ಪೂಜೆ ಸಲ್ಲಿಸಿದರು. ಸಂಜೆ ಊರಮ್ಮ ದೇವಿ ಮೆರವಣಿಗೆ ನಡೆಯಿತು. ನಂತರ ಪ್ರಸಾದ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಬಣಕಾರ ಸಿದ್ದಪ್ಪ, ದೇವಸ್ಥಾನ ಸಮಿತಿಯ ಗೌರವಾಧ್ಯಕ್ಷ ಪೂಜಾರ್ ಶಿವಮೂರ್ತಪ್ಪ, ಅಧ್ಯಕ್ಷ ಸುರೇಶ್ ಚಂದಪೂರ್, ಪ್ರಧಾನ ಕಾರ್ಯದರ್ಶಿ ಕೆ.ಬಿ. ರಾಜಶೇಖರ್, ಉಪಾಧ್ಯಕ್ಷ ಎಂ. ಚಿದಾನಂದ ಕಂಚಿಕೇರಿ, ಸುರೇಶ್ ಹಣಗಿ, ಖಜಾಂಚಿ ಬೆಣ್ಣೆ ರೇವಣಸಿದ್ದಪ್ಪ, ಸಹ ಕಾರ್ಯದರ್ಶಿಗಳಾದ ಗುತ್ಯಪ್ಪ, ರಾಘು ಚೌಗಲೆ ಮತ್ತಿತರರು ಹಾಜರಿದ್ದರು.

# ಹರಿಹರ : ಪ್ರೊ. ಎಸ್ಸೆಚ್ ಭಿಕ್ಷಾವರ್ತಿಮಠ ಅವರ 'ವಚನ ಸ್ಪಂದನ' ಕೃತಿ ಬಿಡುಗಡೆ



ಹರಿಹರ,ನ.24- ಕನ್ನಡ ನಾಡು- ನುಡಿ, ನೆಲ-ಜಲಕ್ಕೆ ಸಂಬಂಧಿಸಿದ ಕಾರ್ಯಕ್ರಮಕ್ಕೆ ಸಾರ್ವಜನಿಕರ ಪ್ರೋತ್ಸಾಹ ಮತ್ತು ಪಾಲ್ಗೊಳ್ಳುವಿಕೆ ಹೆಚ್ಚಾದಷ್ಟು ಕನ್ನಡ ಸಮಾರಂಭಗಳು ಯಶಸ್ವಿಯಾ ಗುತ್ತವೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಅಭಿಪ್ರಾಯಪಟ್ಟರು.

ನಗರದ ತಿಪ್ಪೇರುದ್ರಸ್ವಾಮಿ ಪ್ರೌಢಶಾಲಾ ಆವರಣದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್. ಹೆಚ್. ಭಿಕ್ಷಾವರ್ತಿಮಠ ಅವರ 'ವಚನ ಸ್ಪಂದನ' ಕೃತಿ ಬಿಡುಗಡೆ, ಅಭಿನಂದನೆ ಹಾಗೂ ಪರಸ್ಪರ ಸ್ನೇಹ-ಸಮ್ಮಿಲನ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೊಬೈಲ್, ಲ್ಯಾಪ್ ಟಾಪ್ ಸೇರಿದಂತೆ ಇತರೆ ತಾಂತ್ರಿಕತೆ ವ್ಯವಸ್ಥೆಗಳು ಬಂದಾಗಿನಿಂದ ಓದುಗರ ಕೊರತೆ ಕಂಡು ಬರುತ್ತಿದೆ. ಓಡಿ ಸೇರಿದಂತೆ ಹಲವು ಬಗೆಯ ಸೌಲಭ್ಯಗಳನ್ನು ಒದಗಿಸಿದರೂ ಸಹ ಕನ್ನಡದ ಕಾರ್ಯಕ್ರಮದಲ್ಲಿ ಜನರು ಪಾಲ್ಗೊಳ್ಳುವುದು ಹಾಗೂ ಪ್ರೋತ್ಸಾಹ ನೀಡುವುದು ಕಡಿಮೆಯಾಗುತ್ತಾ ಸಾಗಿರುವುದು ವಿಷಾದದ ಸಂಗತಿ ಎಂದರು.

ಪ್ರೊ. ಎಸ್.ಹೆಚ್.ಭಿಕ್ಷಾವರ್ತಿಮಠ ಪ್ರಾಸ್ತಾವಿಕವಾಗಿ ಮಾತನಾಡಿ, ಹರಿಹರ ನಗರದಲ್ಲಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಸದಾ ಕಾಲ ನಡೆಯುವಂತಾಗಬೇಕೆಂಬುದು ನಮ್ಮ ಉದ್ದೇಶವೆಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಸ್.ಹೆಚ್. ಹೂಗಾರ್ ಮಾತನಾಡಿ, ಹಿಂದೆ ಮೂರು ಗಂಟೆ ವೀಕ್ಷಣೆ ಮಾಡುವಂತ ಸಿನಿಮಾ ಬರುತ್ತಿದ್ದವು. ಆದರೆ ಇತ್ತೀಚೆಗೆ ಸಿನಿಮಾ ರಂಗದಲ್ಲಿ ಕಡಿಮೆ ಅವಧಿಯ ಸಿನಿಮಾ ಬರುತ್ತಿರುವುದು ಕಾಣುತ್ತಿದ್ದೇವೆ. ಕಾರಣ ಇತ್ತೀಚೆಗೆ ಸಮಯಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುವಂತಹ ಕಾಲಘಟ್ಟದಲ್ಲಿ ಇಂದಿನ ಯುವಕರು ಸಾಗುತ್ತಿರು ವುದರಿಂದ ಹೊಸ ಹೊಸ ಕವಿಗಳ ಕೊರತೆಯನ್ನು ಕಾಣುತ್ತೇವೆ. ಅದಕ್ಕೆ ಪೂರಕವಾಗಿ ಎಲ್ಲಾ ಬಗೆಯ ವಿಚಾರಗಳ ಚರ್ಚೆಗಳು ಇಂದಿನ ಸಮಾರಂಭದಲ್ಲಿ ಕಾಣುತ್ತಿದ್ದೇವೆ ಎಂದು ಹೇಳಿದರು.

ಮಾನ್ಯತಾ ನಾಡಗೌಡ್ರು ಯಾವುದೇ ಪುಸ್ತಕ ಬಿಡುಗಡೆ ಆದರೆ ಅವುಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಡಿಯಲ್ಲಿ ಬಿಡುಗಡೆ ಆಗುವಂತಾಗಲಿ. ತಾಲ್ಲೂಕಿಗೊಂದು ಕನ್ನಡ ಭವನ ನಿರ್ಮಾಣ ವಾಗುವಂತೆ ಸರ್ಕಾರ ಚಿಂತನೆ ಮಾಡಬೇಕೆಂದು ಹೇಳಿದರು.

ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಾಹಿತಿಗಳಾದ ನಿವೃತ್ತ ಪ್ರೊ. ಸಿ.ವಿ. ಪಾಟೀಲ, ಜೆ. ಕಲೀಂಬಾಷಾ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಡಿ.ಎಂ ಮಂಜುನಾಥಯ್ಯ, ಸಾಹಿತಿ ಲಿಂಗರಾಜ್ ಕಮ್ಮಾರ್ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಬಿ. ದಿಳ್ಳೆಪ್ಪ, ಕಾಳಿದಾಸ ವಿದ್ಯಾಸಂಸ್ಥೆ ಅಧ್ಯಕ್ಷ ಕೆ.ಬಿ. ರಾಜಶೇಖರ, ದೂಡಾ ಮಾಜಿ ಸದಸ್ಯ ಹೆಚ್. ನಿಜಗುಣ, ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಕಾರ್ಯದರ್ಶಿಗಳಾದ ಬಿ.ಬಿ. ರೇವಣ್ಣನಾಯ್ಕ್, ಎಂ. ಚಿದಾನಂದ ಕಂಚಿಕೇರಿ, ಪರಮೇಶ್ವರಪ್ಪ ಕತ್ತಿಗೆ, ಎ. ರಿಯಾಜ್ ಆಹ್ಮದ್, ವಿ.ಬಿ. ಕೊಟ್ರೇಶ್, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಸಂಘಟನಾ ಕಾರ್ಯದರ್ಶಿ ನಾಗರಾಜ್ ಕೋಡಿಹಳ್ಳಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಘಟನಾ ಕಾರ್ಯದರ್ಶಿ ಜಗದೀಶ್ ಕೂಲಂಬಿ, ಉಪನ್ಯಾಸಕ, ಶಿವಯೋಗಿ, ಹುಲಿಕಟ್ಟಿ ಚನ್ನಬಸಪ್ಪ, ಹೆಚ್.ಸಿ. ಕೀರ್ತಿಕುಮಾರ್, ಆರ್. ಮಂಜುನಾಥ್, ಎನ್.ಇ. ಸುರೇಶ್, ಗುರುಬಸವರಾಜ್ ಇತರರು ಹಾಜರಿದ್ದರು.

ಪರಮೇಶ್ವರಪ್ಪ ಕತ್ತಿಗೆ ಪ್ರಾರ್ಥಿಸಿದರು. ಬಿ.ಬಿ. ರೇವಣ್ಣನಾಯ್ಕ್ ಸ್ವಾಗತಿಸಿ, ನಿರೂಪಿಸಿದರು. ವಿ.ಬಿ. ಕೊಟ್ರೇಶ್ ವಂದಿಸಿದರು.

# ಕೊಕ್ಕನೂರಿನಲ್ಲಿ ಬೃಹತ್ ಆರೋಗ್ಯ ತಪಾಸಣೆ ಶಿಬಿರ



ಮಲೇಬೆನ್ನೂರು, ನ.24- ಕೊಕ್ಕನೂರು ಗ್ರಾಮದ ಶ್ರೀ ಪವನದೇವ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ನೊಳಂಬ ವೀರಶೈವ ಲಿಂಗಾಯತ ಸಂಘ ಹಾಗೂ ನಂದಿಗುಡಿ ಸಂಸ್ಥಾನ ಕೃಪಾಪೋಷಿತ ವೀರಶೈವ ವಿದ್ಯಾವರ್ಧಕ ಸಂಘದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಬೃಹತ್ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಗೌರಮ್ಮ ಧರ್ಮರಾಜ್ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು.

ಈ ವೇಳೆ ಪ್ರಾಸ್ತಾವಿಕವಾಗಿ ಮಾತನಾಡಿದ ದಾವಣಗೆರೆಯ ಲತಾ ನರ್ಸಿಂಗ್ ಹೋಮ್‌ನ ಡಾ. ಇ. ವಿರುಪಾಕ್ಷಪ್ಪ ಅವರು, ಹಳ್ಳಿ ಜನರು ತಮ್ಮ ನಿತ್ಯದ ಹೊಲ-ಮನೆ ಕೆಲಸದಲ್ಲಿ ತೊಡಗಿಕೊಂಡು ಆರೋಗ್ಯದ ಬಗ್ಗೆ ನಿಗಾ ವಹಿಸದೇ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ. ಯಾವುದೇ ಸೂಚನೆ ಇಲ್ಲದೆ ಮಹಿಳೆಯರಲ್ಲಿ ಕೆಲವು ಕಾಯಿಲೆಗಳು ಕಾಣಿಸಿಕೊಳ್ಳುತ್ತಿದ್ದು, ಈ ಬಗ್ಗೆ ಅವರು ಎಚ್ಚರ ವಹಿಸಬೇಕು. ಸಣ್ಣ ಸಮಸ್ಯೆ ಕಂಡು ಬಂದರೂ ವೈದ್ಯರ ಬಳಿ ತಪಾಸಣೆಗೆ ಹೋಗಿ ಎಂದು ಕಳಕಳಿ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಕೀಲರಾದ ಕೆ.ಜಿ. ಶಾಂತರಾಜ್ ಮಾತನಾಡಿ, ವೃತ್ತಿ ನಿರತರು ತಮ್ಮ ಬಿಡುವಿನ ಸಮಯದಲ್ಲಿ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕೆಂಬ ಉದ್ದೇಶ ಹೊಂದಿ ಈ ಆರೋಗ್ಯ ಶಿಬಿರ ಸಂಘಟಿಸಿದ್ದೇವೆ. ಮುಂದಿನ ದಿನಗಳಲ್ಲಿ ಆರೋಗ್ಯ, ಶಿಕ್ಷಣ, ಸೇರಿದಂತೆ ಪ್ರತಿಯೊಂದು ವಿಷಯದಲ್ಲೂ ಜನಪರ ಕಾರ್ಯಕ್ರಮಗಳನ್ನು ಮಾಡುತ್ತೇವೆ ಎಂದರು.

ಡಾ. ಎನ್.ಆರ್.ದಿನೇಶ್ ಕುಮಾರ್ ಮಾತನಾಡಿದರು. ಮಲೇಬೆನ್ನೂರಿನ ಶ್ರೀ ನಂದಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಜಿಗಳಿಯ ಗೌಡ್ರು ಬಸವರಾಜಪ್ಪ, ಕುಕ್ಕುವಾಡದ ನಂದಿ ಸಹಕಾರ ಸಂಘದ ಅಧ್ಯಕ್ಷ ಜಿ.ಎಂ. ರುದ್ರಗೌಡ, ಗ್ರಾಮದ ಮುಖಂಡರಾದ ಎಂ. ನಿಂಗನಗೌಡ, ಹನುಮಗೌಡ್ರು, ಧರ್ಮಣ್ಣ, ಗ್ರಾ.ಪಂ. ಮಾಜಿ ಅಧ್ಯಕ್ಷ ಓ. ನಿಂಗನಗೌಡ, ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಅಧ್ಯಕ್ಷ ಅಭಿನಂದನ್ ಪಾಟೀಲ್, ಜಿಗಳಿ ಇಂದೂಧರ್, ಹಳ್ಳಿಹಾಳ್ ಹೆಚ್.ಟಿ. ಪರಮೇಶ್ವರಪ್ಪ, ಹೆಚ್. ವೀರನಗೌಡ, ಬಸವಾಪುರದ ಮಲ್ಲಯ್ಯ, ವಕೀಲ ನಂದಿತಾವರೆ ತಿಮ್ಮನಗೌಡ, ಕೆ.ಎನ್. ಹಳ್ಳಿಯ ಕೆ.ಹೆಚ್. ನಾಗನಗೌಡ, ರುದ್ರಗೌಡ, ಡಿಸಿಸಿ ಬ್ಯಾಂಕಿನ ಮಲೇಬೆನ್ನೂರು ಶಾಖೆ ಮ್ಯಾನೇಜರ್ ಹನುಮಗೌಡ, ಶಿಕ್ಷಕ ನಾಗರಾಜ್, ಆರೋಗ್ಯ ಇಲಾಖೆಯ ಬಿ.ಎಸ್. ಸುರೇಶ್, ಬೇವಿನಹಳ್ಳಿ ರಾಮನಗೌಡ ಮತ್ತಿತರರು ಭಾಗವಹಿಸಿದ್ದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಶಿಬಿರಕ್ಕೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಬಿರದಲ್ಲಿ ಹೆರಿಗೆ, ಸ್ತ್ರೀರೋಗ ತಜ್ಞ ಡಾ. ಇ. ವಿರುಪಾಕ್ಷಪ್ಪ, ಕಣ್ಣಿನ ತಜ್ಞ ಡಾ. ಈಶ್ವರಪ್ಪ, ಮಕ್ಕಳ ತಜ್ಞ ಡಾ. ಎಂ.ಬಿ. ಬಸವಕುಮಾರ್, ಕೀಲು-ಮೂಳೆ ತಜ್ಞ ಡಾ. ಬಿ.ವಿ. ದೀಪಕ್, ಶಸ್ತ್ರ ಚಿಕಿತ್ಸೆ ತಜ್ಞ ಡಾ. ಕೆ.ಎನ್. ಪವನ್, ಫಿಜಿಷಿಯನ್ ಡಾ. ಎಸ್.ಎಸ್. ಸಾಹುಕಾರ್, ಮಕ್ಕಳ ಹೃದಯ ತಜ್ಞ ಡಾ. ಅರುಣ್‌ಕುಮಾರ್, ದಂತ ವೈದ್ಯರಾದ ಡಾ. ಉಷಾ ಮತ್ತು ಡಾ. ಮಂಜುನಾಥ್ ಪಾಟೀಲ್ ಪಾಲ್ಗೊಂಡಿದ್ದರು.

ನಯನ ಸಂಗಡಿಗರು ಪ್ರಾರ್ಥಿಸಿದರು. ಡಾ. ಎನ್.ಆರ್. ದಿನೇಶ್‌ಕುಮಾರ್ ಸ್ವಾಗತಿಸಿದರು. ಉಪನ್ಯಾಸಕ ಡಾ. ಬಿ.ಸಿ. ರಾಕೇಶ್ ನಿರೂಪಿಸಿದರೆ, ಉಪನ್ಯಾಸಕ ಡಾ.ಅಶೋಕ್‌ಕುಮಾರ್ ಪಾಳೇದ್ ವಂದಿಸಿದರು.

# ಕುತೂಹಲ ಗುಣ ಬೆಳೆಸಿಕೊಂಡವರು ವಿಜ್ಞಾನಿ ಆಗಲು ಸಾಧ್ಯ : ಪ್ರೊ. ಎಸ್.ಎಂ.ಶಿವಪ್ರಸಾದ್




ಕೊಟ್ಟೂರು, ನ.24- ನಿಸರ್ಗದ ಬಗ್ಗೆ ಅರ್ಥೈಸಿಕೊಳ್ಳುವುದರ ಜೊತೆಯಲ್ಲಿ ಕುತೂಹಲ ಗುಣ ಬೆಳೆಸಿಕೊಂಡವರು ವಿಜ್ಞಾನಿಗಳಾಗಲು ಸಾಧ್ಯ ಎಂದು ಧಾರವಾಡ ಐಐಟಿ ಪ್ರಾಧ್ಯಾಪಕ ಹಾಗೂ ವಿಜ್ಞಾನಿ ಪ್ರೊ. ಎಸ್.ಎಂ.ಶಿವಪ್ರಸಾದ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಗೊರ್ಲಿ ಶರಣಪ್ಪ ಪದವಿ ಪೂರ್ವ ಕಾಲೇಜಿನ ಸಭಾಭವನದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಹಾಗೂ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ವಿವಿಧ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ 'ವಿಜ್ಞಾನದ ಅರಿವು ಮತ್ತು ಜಾಗೃತಿ' ವಿಷಯದ ಬಗ್ಗೆ ಅವರು ಉಪನ್ಯಾಸ ನೀಡಿ ಸಂವಾದ ನಡೆಸಿದರು.

ವಿಜ್ಞಾನ ಎಂಬುದು ಸತ್ಯವಾದ ಮತ್ತು ಸುಂದರವಾದ ವಿಷಯವಾಗಿದೆ. ವಿದ್ಯಾರ್ಥಿಗಳು ಕೇವಲ ಪಠ್ಯಕ್ರಮಕ್ಕೆ ಸೀಮಿತವಾಗದೇ ಅದರಾಚೆಗೂ ವ್ಯಾಪಕ ಕಲಿಕೆಗೆ ಒತ್ತು ನೀಡುವತ್ತ ಗಮನ ಹರಿಸಬೇಕು ಹಾಗೂ ಪ್ರಶ್ನಿಸುವ ಗುಣ ಬೆಳೆಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳನ್ನು ವೈಜ್ಞಾನಿಕ ಚಿಂತನೆಗೆ ಪ್ರಚೋದಿಸುವ ಹಾಗೂ ಮೂಲ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವಲ್ಲಿ ಉಪನ್ಯಾಸಕರ ಪಾತ್ರ ಮುಖ್ಯವಾಗಿದೆ ಎಂದರು. ಕೇವಲ ಅಂಕಗಳ ಮಾನದಂಡದಿಂದ ವಿದ್ಯಾರ್ಥಿಗಳ ಜಾಣತನ ಅಳೆಯಬಾರದು ಅವರಲ್ಲಿ ಅಡಗಿರುವ ಆಸಕ್ತಿಗೆ ತಕ್ಕಂತೆ ಪ್ರೋತ್ಸಾಹಿಸುವ ನಿಟ್ಟಿನತ್ತ ಪಾಲಕರು ಹಾಗೂ ಶಿಕ್ಷಕರು ಮುಂದಾಗಬೇಕೆಂದರು.

ಈ ಸಂದರ್ಭದಲ್ಲಿ ವಿಜ್ಞಾನ ಸಮಿತಿ ಸದಸ್ಯ ಅಬಲೂರು ಶಾಂತಕುಮಾರ್, ರಾಮಣ್ಣ, ನಾಗರಾಜ್ ಬಂಜಾರ್, ವಿನಯ್ ಮುದೇನೂರ್, ಉಪನ್ಯಾಸಕರಾದ ಸಿ.ಬಸವರಾಜ್, ಕೆ.ಎಂ.ರೇಣುಕಾಸ್ವಾಮಿ, ಆರಾಧ್ಯ ಸ್ವಾಮಿ, ಚೇತನ್ ಚೌವಾಣ್, ಡಾ.ವಿಜಯಕುಮಾರ್, ಕೆ. ಕೊಟ್ರೇಶ್, ಶಿವಪ್ರಕಾಶ್ ಮತ್ತಿತರರು ಪಾಲ್ಗೊಂಡಿದ್ದರು.

# ಹೊನ್ನಾಳಿ : ಕಾಂಗ್ರೆಸ್ ಪಕ್ಷದಿಂದ ವಿಜಯೋತ್ಸವ



ಹೊನ್ನಾಳಿ, ನ. 24 - ರಾಜ್ಯದ ಮೂರು ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ ಕಾರಣ ತಾಲ್ಲೂಕು ಕಾಂಗ್ರೆಸ್ ಪಕ್ಷವು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಂಜಪ್ಪ ನೇತೃತ್ವದಲ್ಲಿ ವಿಜಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಮೈಲಪ್ಪ, ಮುಖಂಡರಾದ ವಿಜೇಂದ್ರಣ್ಣ, ನರಸಿಂಹ, ಸರಳಿಮನೆ ರಾಜು, ಅಣ್ಣಪ್ಪ, ಬೆನಕನಹಳ್ಳಿ ವೀರಣ್ಣ, ಮಲ್ಲೇಶ್, ಸೊರಟೂರು ಬಸವನಗೌಡ ಇನ್ನಿತರರಿದ್ದರು.


## ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನಾಳೆ ಚದುರಂಗೋತ್ಸವ

ದಾವಣಗೆರೆ, ನ. 24 - ನಾಡಿದ್ದು ದಿನಾಂಕ 26 ರಂದು ಪಾಲಿಕೆಯಲ್ಲಿ ಆಚರಿಸಲಾಗುತ್ತಿರುವ ಕನ್ನಡ ರಾಜ್ಯೋತ್ಸವದ ಅಂಗವಾಗಿ ಮಂಗಳವಾರ ಬೆಳಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಪಾಲಿಕೆಯ ಎರಡನೇ ಫ್ಲೋರ್ ಆವರಣದಲ್ಲಿ 'ಚದುರಂಗೋತ್ಸವ' ಚದುರಂಗ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಈ ಸ್ಪರ್ಧೆಯಲ್ಲಿ ಮಹಾನಗರ ಪಾಲಿಕೆಯ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು, ನೌಕರರು, ಆಡಳಿತ ವರ್ಗದವರು, ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಮಹಾಪೌರರಾದ ಕೆ. ಚಮನ್ ಸಾಬ್ ತಿಳಿಸಿದರು.

## ನೇರ ಗುತ್ತಿಗೆ ನೇಮಕ

**(1ನೇ ಪುಟದಿಂದ)** ವಿರೋಧಿಸಿದ್ದವು. ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿಲ್ಲ ಎಂದು ಪಕ್ಷಗಳು ಆಕ್ಷೇಪಿಸಿದ್ದವು. ಈ ಹಿನ್ನೆಲೆಯಲ್ಲಿ ನೇಮಕಾತಿ ಜಾಹೀರಾತು ವಾಪಸ್ ಪಡೆಯಲು ಯು.ಪಿ.ಎಸ್.ಸಿ.ಗೆ ಕೇಂದ್ರ ಸರ್ಕಾರ ತಿಳಿಸಿತ್ತು. ನಾಗರಿಕ ಸೇವಾ ಪರೀಕ್ಷೆ ಮೂಲಕ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಆದರೆ, ನಿರ್ದಿಷ್ಟ ವಲಯಗಳಲ್ಲಿ ಪರಿಣಿತಿ ಹೊಂದಿರುವವರನ್ನು ಗುತ್ತಿಗೆ ಅವಧಿ ಮೇಲೆ ನೇರ ನೇಮಕ ಮಾಡಿಕೊಳ್ಳಲಾಗುತ್ತದೆ. ಇದರಲ್ಲಿ ಯಾವುದೇ ಮೀಸಲಾತಿ ಇರುವುದಿಲ್ಲ.

# ಪಿ.ಜೆ.ಬಡಾವಣೆ ವಕ್ಫ್ ಆಸ್ತಿಯಲ್ಲ, ಸರ್ಕಾರದ ದಾಖಲೆಯಲ್ಲಿ ತಿದ್ದುಪಡಿ



**(1ನೇ ಪುಟದಿಂದ)** ಇದಕ್ಕೆ ಪೂರಕವಾಗಿ ಈ ಹಿಂದಿನ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು ಸಹ ಮುಸ್ಲಿಂ ಸಮಾಜದ ಮುಖಂಡರ ಸಭೆಯಲ್ಲಿ ವಕ್ಫ್ ಆಸ್ತಿ ಬಗ್ಗೆ ಗಂಭಿರವಾಗಿ ಪರಿಗಣಿಸಿ ವಾಪಾಸ್ ನೀಡಲಾಗುವುದು ಎಂದು ತಿಳಿಸಿದ್ದರು.

ಅದರಂತೆ ಪಿ.ಜೆ.ಬಡಾವಣೆಯ ಮಹಾನಗರ ಪಾಲಿಕೆ ಆಸ್ತಿಯನ್ನು ವಕ್ಫ್ ಆಸ್ತಿಯೆಂದು ಅಂದಿನ ಮುಖ್ಯಮಂತ್ರಿ ಸದಾನಂದಗೌಡ ಅವರ ಸೂಚನೆಯಂತೆ ತಿದ್ದುಪಡಿ ಮಾಡಲಾಗಿತ್ತು.

ಈ ಬಗ್ಗೆ ಪಿ.ಜೆ.ಬಡಾವಣೆಯ ನಾಗರಿಕರು ಆತಂಕ ವ್ಯಕ್ತಪಡಿಸಿ, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಅವರ ಮುಖಾಂತರ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಗಮನಕ್ಕೆ ತಂದ ನಂತರ ಸಚಿವರು ಸರ್ಕಾರದೊಂದಿಗೆ ಮಾತನಾಡಿ ತಿದ್ದುಪಡಿಗೆ ಸೂಚನೆ ನೀಡಿದರು.

ಸರ್ಕಾರ ಇಂದು ತಿದ್ದುಪಡಿ ಮಾಡಿದ್ದು, ಪಹಣಿಯಲ್ಲಿ ಸರ್ಕಾರಿ ಖರಾಬು ಜಾಗ ಎಂದು ತಿದ್ದುಪಡಿ ಮಾಡಲಾಗಿದೆ. ಇದಕ್ಕೆ ಸ್ಥಳೀಯ ನಾಗರಿಕರಾದ ಮಧು ಪವಾರ್, ಸಂದೀಪ್ ಜೈನ್, ನಾಕೊಡ ಸುರೇಶ್, ವಿಜಯ್ ಜೈನ್, ಕಾಸಲ್ ಬದ್ರಿನಾಥ್, ಉತ್ತಮ್ ಜೈನ್, ನಿರಂಜನ್ ನಿಶಾನಿಮಠ, ಚೈನ್‌ರಾಜ್, ಹೆಚ್.ವಿ. ರಾಮದಾಸ್, ಪ್ರಭು ಐಗೂರು, ರಾಜುಭಂಡಾರಿ, ಶ್ರೀಕಾಂತ್ ಬಗೆರ, ಮಹೇಂದ್ರ ಕುಮಾರ್ ಅವರುಗಳು ಹರ್ಷ ವ್ಯಕ್ತಪಡಿಸಿ ಸಚಿವ ಮಲ್ಲಿಕಾರ್ಜುನ್ ಮತ್ತು ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಅವರನ್ನು ಅಭಿನಂದಿಸಿದ್ದಾರೆ.

# ಉಪ ಚುನಾವಣೆಗಳಲ್ಲಿ ಸ್ಪರ್ಧಿಸದಿರಲು ಬಿಎಸ್‌ಪಿ ನಿರ್ಧಾರ

### ನಕಲಿ ಮತದಾನ ಎಂದು ಆಕ್ಷೇಪ

ಲಖ್ನೌ, ನ. 24 – ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಅವ್ಯವಹಾರಗಳು ನಡೆದಿವೆ. ನಕಲಿ ಮತದಾನದ ಬಗ್ಗೆ ಚುನಾವಣಾ ಆಯೋಗ ಕ್ರಮ ತೆಗೆದುಕೊಳ್ಳುವವರೆಗೂ ತಮ್ಮ ಪಕ್ಷ ಉಪ ಚುನಾವಣೆಗಳಲ್ಲಿ ಸ್ಪರ್ಧಿಸುವುದಿಲ್ಲ ಎಂದು ಬಿ.ಎಸ್.ಪಿ. ಅಧ್ಯಕ್ಷೆ ಮಾಯಾವತಿ ಹೇಳಿದ್ದಾರೆ. ಉತ್ತರ ಪ್ರದೇಶದ ಒಂಭತ್ತು ಕ್ಷೇತ್ರಗಳಿಗೆ ನವೆಂಬರ್ 20ರಂದು ಚುನಾವಣೆ ನಡೆದಿತ್ತು. ಶನಿವಾರ ಫಲಿತಾಂಶ ಪ್ರಕಟವಾಗಿತ್ತು. ಒಂಭತ್ತೂ ಕ್ಷೇತ್ರಗಳಲ್ಲಿ ಬಿ.ಎಸ್.ಪಿ. ಸ್ಪರ್ಧಿಸಿತ್ತಾದರೂ, ಎಲ್ಲೂ ಗೆಲ್ಲಲು ಸಾಧ್ಯವಾಗಿಲ್ಲ. ಮತಯಂತ್ರಗಳಲ್ಲಿ ನಕಲಿ ಮತದಾನ ನಡೆಯುತ್ತಿದೆ. ಇದು ವಿಷಾದಕರ ಹಾಗೂ ಪ್ರಜಾಪ್ರಭುತ್ವಕ್ಕೆ ಕಳವಳಕಾರಿ ವಿಷಯ ಎಂದು ಮಾಯಾವತಿ ಹೇಳಿದ್ದಾರೆ.

ಚುನಾವಣಾ ಆಯೋಗ ನಕಲಿ ಮತದಾನ ತಡೆಯಲು ಕಠಿಣ ಕ್ರಮ ತೆಗೆದುಕೊಳ್ಳುವವರೆಗೂ ನಾವು ಮುಂದಿನ ಉಪ ಚುನಾವಣೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಮಾಯಾವತಿ ಹೇಳಿದ್ದಾರೆ.

ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಸರ್ಕಾರ ಬದಲಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಸ್ವಲ್ಪ ಮಟ್ಟಿಗಿನ ಸುರಕ್ಷತೆ ಇರುತ್ತದೆ. ಇದರಿಂದಾಗಿ ಸರ್ಕಾರಿ ಯಂತ್ರ ಹದ್ದುಬಸ್ತಿನಲ್ಲಿ ಕೆಲಸ ಮಾಡುತ್ತದೆ ಎಂದವರು ತಿಳಿಸಿದ್ದಾರೆ

## ನಗರದ ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ಇಂದು ಜ್ಞಾನಯಜ್ಞ ಸಪ್ತಾಹ



ವರ್ತುಲ ರಸ್ತೆ, ಎಸ್.ಎಸ್ ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಮಾತೋಶ್ರೀ ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ 29ನೇ ಜ್ಞಾನಯಜ್ಞ ಸಪ್ತಾಹ ಮತ್ತು ಕಾರ್ತಿಕ ಮಹೋತ್ಸವವನ್ನು ಇಂದು ಆಚರಿಸಲಾಗುವುದು. ಬೆಳಿಗ್ಗೆ 5 ಗಂಟೆಗೆ ಕಾಕಡಾರತಿ, ಬೆಳಿಗ್ಗೆ 10 ಗಂಟೆಗೆ ಪೂಜೆ, ದಾಸಭೋದ ಗ್ರಂಥ ಪಠಣದ ನಂತರ ಪೂಜ್ಯರ 'ಪುಣ್ಯ ಸ್ಮರಣೆ' ಮಾಡುವುದು. ಮಧ್ಯಾಹ್ನ 12 ಗಂಟೆಗೆ ಪುಷ್ಪವೃಷ್ಟಿಗೈಯ್ಯುವುದು, ನಂತರ ಮಹಾ ಪ್ರಸಾದ ವ್ಯವಸ್ಥೆ ಇರುತ್ತದೆ.

## ಎಲೆಬೇತೂರಿನ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕೋತ್ಸವ



ದಾವಣಗೆರೆ, ನ.24- ಎಲೆಬೇತೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ ವಿಜೃಂಭಣೆಯಿಂದ ನಡೆಯಿತು. ದೇವಸ್ಥಾನವನ್ನು ವಿದ್ಯುತ್ ದೀಪಗಳಿಂದ ಹಾಗೂ ಮಾವಿನ ತೋರಣ ಮತ್ತು ಬಾಳೆ ಕಂಬದಿಂದ ಅಲಂಕರಿಸಲಾಗಿತ್ತು. ಕಮಿಟಿಯವರು ಭಕ್ತಾದಿಗಳಿಗೆ ಕಾರಾಮಂಡಕ್ಕಿ ಪಳ್ಹಾರ ವಿನಿಯೋಗ ಮಾಡಿದರು.

# ಪ್ರತಿಯೊಬ್ಬರೂ ದೇಶದ ಕಾನೂನು ತಿಳಿದಿರಬೇಕು

**ಶ್ರೀರಾಮ್ ಹೆಗಡೆ**

ದಾವಣಗೆರೆ, ನ.24- ದೇಶದಲ್ಲಿ ಬದುಕುವ ಪ್ರತಿಯೊಬ್ಬರೂ ದೇಶದ ಕಾನೂನುಗಳನ್ನು ತಿಳಿದಿರಬೇಕು ಎಂದು ನ್ಯಾಯಾಧೀಶ ಶ್ರೀರಾಮ್ ಹೆಗಡೆ ತಿಳಿಸಿದರು.

ನಗರದ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಈಚೆಗೆ ಆಯೋಜಿಸಿದ್ದ 'ಮಕ್ಕಳಿಗಾಗಿ ಕಾನೂನು ಅರಿವು-ನೆರವು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ್ ಮಾತನಾಡಿ, ಸಂವಿಧಾನವು ದೇಶವನ್ನು ಹೇಗೆ ಮುನ್ನಡೆಸಬೇಕೆಂದು ತಿಳಿಸುತ್ತದೆ ಎಂದು ಹೇಳಿದರು. ಬಾಲ ನ್ಯಾಯಂಗ ಮಂಡಳಿಯಡಿ ಅನಾಥ ಮಕ್ಕಳಿಗೆ ರಕ್ಷಣೆ ನೀಡುವ ಶಿಕ್ಷಣ ಒದಗಿಸಿಕೊಡುವ ಬಗ್ಗೆ ಮಾಹಿತಿ ಹಾಗೂ ಪೋಕ್ಸೋ ಕಾಯಿದೆಯ ಮಾಹಿತಿ ನೀಡಿದರು.

ಈ ವೇಳೆ ಸಿ.ಆರ್.ಪಿ .ಮಂಜಾನಾಯಕ್, ಶಾಲೆಯ ಮುಖ್ಯಶಿಕ್ಷಕಿ ಸುಗುಣ, ಶಾಲೆಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿದ್ದರು.

# ಪೊಲೀಸ್ ಅಧಿಕಾರಿ ಪತ್ರಿಕಾಗೋಷ್ಠಿ ವೇಳೆಯೇ 'ಡಿಜಿಟಲ್ ಬಂಧನ' ವಂಚನೆಯ ಕರೆ !

ಇಂದೋರ್, ನ. 24 – ಮಧ್ಯ ಪ್ರದೇಶದ ಇಂದೋರ್‌ನ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಪತ್ರಿಕಾಗೋಷ್ಠಿ ನಡೆಸುತ್ತಿರುವಾಗಲೇ, ಆನ್‌ಲೈನ್ ವಂಚಕರು ಅವರನ್ನು 'ಡಿಜಿಟಲ್ ಬಂಧನ'ಕ್ಕೆ ಒಳಪಡಿಸಲು ಕರೆ ಮಾಡಿದ ಘಟನೆ ನಡೆದಿದೆ.

ಇಂದೋರ್ ಎ.ಡಿ.ಸಿ.ಪಿ. ರಾಜೇಶ್ ದಂಡೋಟಿಯ ಅವರು ಪತ್ರಿಕಾಗೋಷ್ಠಿ ನಡೆಸುತ್ತಿರುವಾಗ ಕರೆ ಮಾಡಿದ ವಂಚಕರು, ನೀವು ಕ್ರೆಡಿಟ್ ಕಾರ್ಡ್ ದುರ್ಬಳಕೆ ಮಾಡಿಕೊಂಡಿದ್ದೀರಿ. ನಿಮ್ಮ ವಿರುದ್ಧ ಮುಂಬೈನ ಅಂಧೇರಿ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಹೇಳಿದರು.

ಎರಡು ಗಂಟೆಯ ಒಳಗೆ ಪೊಲೀಸ್ ಠಾಣೆಗೆ ಬರದೇ ಇದ್ದರೆ ನಿಮ್ಮ ಬ್ಯಾಂಕ್ ಖಾತೆ ಲಾಕ್ ಮಾಡಲಾಗುವುದು ಎಂದು ವಂಚಕರು ಪೊಲೀಸ್ ಅಧಿಕಾರಿಗೆ ಹೇಳಿದರು.

ಆದರೆ, ನಾನು ಇಂದೋರ್‌ನಲ್ಲಿದ್ದೇನೆ. ಇಷ್ಟು ಕಡಿಮೆ ಅವಧಿಯಲ್ಲಿ ಮುಂಬೈಗೆ ಬರಲು ಸಾಧ್ಯವಾಗದು ಎಂದು ಅಧಿಕಾರಿ ದಂಡೋಟಿಯ ಹೇಳಿದರು.

ಪೊಲೀಸ್ ಠಾಣೆಯಲ್ಲಿರುವ ಬೇರೊಬ್ಬರ ಜೊತೆ ಸಂಪರ್ಕ ಕಲ್ಪಿಸಲಾಗುವುದು. ಅವರ ಜೊತೆ ವಿಡಿಯೋ ಕರೆಯಲ್ಲಿ ಮಾತನಾಡಿ ಎಂದು ವಂಚಕ ಹೇಳಿದ. ಆದರೆ, ಕರೆ ಮಾಡಿದಾಗ ಅಧಿಕಾರಿ ಪೊಲೀಸ್ ಉಡುಗೆಯಲ್ಲಿರುವುದನ್ನು ನೋಡಿದ ತಕ್ಷಣವೇ ಫೋನ್ ಕಟ್ ಮಾಡಿದ.

ಈ ವಿಷಯವನ್ನು ಮಾಧ್ಯಮದವರಿಗೆ ತಿಳಿಸಿದ ಪೊಲೀಸ್ ಅಧಿಕಾರಿ, ಇಡೀ ದೃಶ್ಯವನ್ನು ವಿಡಿಯೋ ಚಿತ್ರೀಕರಣ ಮಾಡಿ, ಇದು ಜನರಿಗೆ ಡಿಜಿಟಲ್ ವಂಚನೆಯ ಕುರಿತು ಅರಿವು ಮೂಡಿಸಲು ನೆರವಾಗಲಿದೆ ಎಂದು ಹೇಳಿದರು.

ಸೈಬರ್ ವಂಚಕರು ಡಿಜಿಟಲ್ ಬಂಧನದ ಹೆಸರಿನಲ್ಲಿ ಜನರನ್ನು ವಂಚಿಸುವ ಘಟನೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿವೆ. ಜನರು ಈ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಸೈಬರ್ ಭದ್ರತಾ ಸಂಸ್ಥೆಗಳು ತಿಳಿಸಿವೆ.



# ಸ್ಪರ್ಧಾ ವಿಜೇತರಾದ ಪೊಲೀಸ್ ಸಿಬ್ಬಂದಿಗಳಿಗೆ ಎಸ್ಪಿ ಉಮಾ ಅಭಿನಂದನೆ

ದಾವಣಗೆರೆ, ನ. 24- ಬೆಂಗಳೂರು ಯಲಹಂಕ ಎಪಿಟಿಎಸ್ ಪೊಲೀಸ್ ತರಬೇತಿ ಕೇಂದ್ರದಲ್ಲಿ ಈಚೆಗೆ ನಡೆದ 6 ನೇ ರಾಜ್ಯ ಮಟ್ಟದ ಪೊಲೀಸ್ ಕರ್ತವ್ಯ ಕೂಟದ ವಿವಿಧ ಸ್ಪರ್ಧೆಗಳಲ್ಲಿ ಪೂರ್ವ ವಲಯದ ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ ಜಿಲ್ಲೆಗಳ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ಭಾಗವಹಿಸಿ, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಅಧಿಕಾರಿ, ಸಿಬ್ಬಂದಿಗಳನ್ನು ಪೂರ್ವ ವಲಯ ಕಛೇರಿಯಲ್ಲಿ ಡಿಐಜಿಪಿ, ಪೂರ್ವ ವಲಯ ಬಿ. ರಮೇಶ್ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಹಾಗೂ ಪೂರ್ವ ವಲಯ ಬೆರಳು ಮುದ್ರೆ ಘಟಕದ ಡಿವೈಎಸ್ಪಿ ಎ.ಕೆ. ರುದ್ರೇಶ್ ಉಪಸ್ಥಿತರಿದ್ದರು.

# ಭದ್ರಾ ಪದವಿ ಕಾಲೇಜಿನಲ್ಲಿ ಕದಳಿ ಕಮ್ಮಟ



ದಾವಣಗೆರೆ, ನ. 24- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಜಿಲ್ಲಾ ಘಟಕದ ವತಿಯಿಂದ ಈಚೆಗೆ ಭದ್ರಾ ಪದವಿ ಕಾಲೇಜಿನಲ್ಲಿ 158ನೇ ಕದಳಿ ಕಮ್ಮಟ ಕಾರ್ಯಕ್ರಮದಲ್ಲಿ ಶರಣ ಚನ್ನಬಸವಣ್ಣ ಹಾಗೂ ಶರಣೆ ನೀಲಾಂಬಿಕೆಯವರ ಸಂಸ್ಮರಣೆ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಕಾಲೇಜಿನ ಕಂಪ್ಯೂಟರ್ ವಿಜ್ಞಾನ ಉಪನ್ಯಾಸಕ ಮಂಜುನಾಥ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸೀತಮ್ಮ ಕಾಲೇಜಿನ ಗ್ರಂಥಪಾಲಕರಾದ ಅನ್ನಪೂರ್ಣ ಪಾಟೀಲ್ ದತ್ತಿ ಅನುಭಾವಿಗಳಾಗಿ ಆಗಮಿಸಿ, ವಚನಗಳ ಮೂಲಕ ಮಕ್ಕಳಿಗೆ ಮನ ಮುಟ್ಟುವಂತೆ ಅನುಭಾವ ನೀಡಿದರು.

ಗಾಯತ್ರಿ ವಸ್ತ್ರದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಘಟಕದ ಅಧ್ಯಕ್ಷರಾದ ಮಮತಾ ನಾಗರಾಜ್, ನಿಕಟ ಪೂರ್ವ ಅಧ್ಯಕ್ಷರಾದ ವಿನೋದ ಅಜಗಣ್ಣನವರ್ ವೇದಿಕೆ ಮೇಲೆ ಉಪಸ್ಥಿತರಿದ್ದರು. ಕದಳಿ ಮಹಿಳಾ ವೇದಿಕೆಯ ನಿರ್ದೇಶಕರಾದ ಪಲ್ಲವಿ ಪಾಟೀಲ್, ಮಾಜಿ ಅಧ್ಯಕ್ಷರಾದ ಕುಸುಮಾ ಲೋಕೇಶ್, ವಿನಾಯಕ ಬಡಾವಣೆಯ ನಗರ ಪಾಲಿಕೆ ಮಾಜಿ ಸದಸ್ಯರಾದ ಜ್ಯೋತಿ ಪಾಟೀಲ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಧುಮತಿ, ಶಾಂತಾ, ಸೌಮ್ಯ ವಚನ ಪ್ರಾರ್ಥನೆ ನಡೆಸಿಕೊಟ್ಟರು. ನಿರ್ಮಲ ಶಿವಕುಮಾರ್ ಸ್ವಾಗತಿಸಿದರು. ವಾಣಿ ರಾಜ್ ದತ್ತಿ ದಾನಿಗಳನ್ನು ಪರಿಚಯಿಸಿದರು. ಲಕ್ಷ್ಮಿ ಮಲ್ಲಿಕಾರ್ಜುನ್ ವಂದಿಸಿದರು. ಚಂದ್ರಿಕಾ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.


**ಸೈಟ್, ಮನೆ, ಜಮೀನು**
ನೇರ ವ್ಯಾಪಾರ, ಸ್ವಚ್ಛ ದಾಖಲೆ, ಸರಿಯಾದ ಅಳತೆಯ ಗುರಿ ನನ್ನದು. ಅರ್ಧ (1/2%) ಪರ್ಸೆಂಟ್ ಕಮಿಷನ್‌ಗೆ ಕೊಡಿಸುತ್ತೇನೆ, ಮಾರಿಸುತ್ತೇನೆ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ದಯವಿಟ್ಟು ನಿಮ್ಮ ಸ್ನೇಹಿತರಿಗೆ. ಬಂಧು-ಬಳಗದವರಿಗೆ ತಿಳಿಸಿರಿ)

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 50x80 North, 40x60 East, 30x40 East, 40x60 40x60 South ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಪಂಚಾಯಿತಿ ಡೋರ್ ನಂಬರ್, ದೂಡಾ ಫೈನಲ್ ಅಪ್ರೂವಲ್ ಸೈಟ್, ಕಡಿಮೆ ದರದಲ್ಲಿ ಸಿಗುತ್ತವೆ. 1 ಅಡಿಗೆ 980 ರೂಪಾಯಿಗೆ ಸಿಗಲಿವೆ.
86183 43463
86187 28546

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ 1ನೇ ಬಸ್ ಸ್ಟಾಪ್‌ನಲ್ಲಿ 40x60 ಪಶ್ಚಿಮ ತರಳಬಾಳು ಬಡಾವಣೆ 5ನೇ ಬಸ್ ಸ್ಟಾಪ್‌ನಲ್ಲಿ 40x60 ಪೂರ್ವ-ದಕ್ಷಿಣ ಕಾರ್ನರ್ 40x60 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಬೇಕಾಗಿದ್ದಾರೆ**
Helpers (male) (full time) Driver cum delivery boy (2nd PUC) Helpers Part time (6pm to 10pm) Sajjan Super Mart, HKR Circle, Nittuvalli, Davangere.
99009 71888

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್‌ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ, 40 ಅಡಿ ರೋಡಿಗಿದೆ. 30x40 South, 30x40 North, 30x50 South, 30x45 North-East Coner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆಗೆ ಸಂಪರ್ಕಿಸಿ**
ಲಹರಿ ಆಟೋಮೋಟಿವ್ಸ್
#856/17, ಸಬ್ ರಿಜಿಸ್ಟರ್ ಆಫೀಸ್ ಎದುರುಗಡೆ, ಪಿಬಿ ರಸ್ತೆ, ದಾವಣಗೆರೆ-2. ಕೆಳಗಿನ ಮಹಡಿ 1500 ಅಡಿಗಳು, 1ನೇ ಮಹಡಿ 3500 ಅಡಿಗಳು, ಖಾಲಿ ಜಾಗ 4400 ಚ.ಅ., ಸೈಟ್ ಸೈಜ್ 50x88
98444 20009, 90711 19996

**ಟ್ಯಾಲಿ ಆದವರು ಬೇಕಾಗಿದ್ದಾರೆ**
ರೈಸ್ ಮಿಲ್‌ನಲ್ಲಿ ಅಕೌಂಟ್ ಟ್ಯಾಲಿ ಮಾಡಲು, ಟ್ಯಾಲಿ ಆದವರು ಬೇಕಾಗಿದ್ದಾರೆ. ಕೆಲಸದ ಸಮಯ ಸಂಜೆ 6 ರಿಂದ 8 ರವರೆಗೆ. ಸಂಪರ್ಕಿಸಿ :
94483 45599

**ಸೈಟ್ ಮಾರಾಟಕ್ಕಿದೆ**
50x80 ಪಶ್ಚಿಮಾಭಿಮುಖ ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ.
99008 92750
98441 16813

**ಫ್ಲಾಟ್‌ಗಳು ಭೋಗ್ಯಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ಭೋಗ್ಯಕ್ಕಿವೆ.
ಬಿ.ಎಸ್. ಸಂತೋಷ
96322 67555

**ಮನೆಗಳು ಲೀಸ್‌ಗಿವೆ**
2BHK ಆರ್ ಸಿ ಸಿ 1ಮತ್ತು 2ನೇ ಮಹಡಿ ಮನೆ, ಪೂರ್ವ ಬಾಗಿಲು, ದೇವರಾಜ ಅರಸ್ ಬಡಾವಣೆ ಎ ಬ್ಲಾಕ್, ಸೀಮೆಎಣ್ಣೆ ಬಂಕ್ ಎದುರು ರಸ್ತೆ, ದಾವಣಗೆರೆ ಲೀಸ್ ಮೊತ್ತ 5.5 ಲಕ್ಷ
1BHK ಆರ್ ಸಿ ಸಿ 1ನೇ ಮಹಡಿ, ಉತ್ತರ ಬಾಗಿಲು, ನಿಟುವಳ್ಳಿ, ಲೆನಿನ್ ನಗರ, ಲೀಸ್ ಮೊತ್ತ 2 ಲಕ್ಷ ಬೋರ್ ವೆಲ್ / ಕಾರ್ಪೊರೇಷನ್ ನೀರು, ಕಾರ್ ಪಾರ್ಕಿಂಗ್ ಸೌಲಭ್ಯ
73493 97287/ 70226 43885

**ಬೇಕಾಗಿದ್ದಾರೆ**
ತರಕಾರಿ ಮತ್ತು ಹಣ್ಣುಗಳನ್ನು ಕತ್ತರಿಸುವುದಕ್ಕಾಗಿ ಸಹಾಯಕರು ಬೇಕಾಗಿದ್ದಾರೆ. (ಸಮಯ ಬೆಳಿಗ್ಗೆ 5 ರಿಂದ 9) (ಸಂಜೆ 4 ರಿಂದ 8 ರವರೆಗೆ) ಡೆಲಿವರಿ ನೀಡಲು ಹುಡುಗರು ಬೇಕಾಗಿದ್ದಾರೆ (ಸಮಯ ಬೆಳಿಗ್ಗೆ 6 ರಿಂದ 3) ಸೂಚನೆ: ತಂಬಾಕು ಮತ್ತು ಗುಟುಕಾ ಅಭ್ಯಾಸ ಇರುವವರಿಗೆ ಅವಕಾಶವಿಲ್ಲ Down To Earth
96327 99723

**OFFICE SPACE FOR RENT**
AC Jayanna & Son Building, 1st Floor, Chamarajpete, Davanagere. Carpet Area : 3050 Sqft. Contact No :
98446 44718, 70190 50911

**2BHK ಮನೆ ಲೀಜ್‌ಗೆ ಇದೆ**
ಪೆಟ್ರೋಲ್ ಬಂಕ್ ಹಿಂಭಾಗ ಹರಿಹರ.
90088 00080

**WANTED**
Banking Sector Job Openings Female Only. Quali : Any Degree.
81508 12961
Interview Time 11 Am

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ
(ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು. ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್ ರೈಸ್ ಸೆಂಟರ್ ಇತ್ಯಾದಿಗಳಿಗೆ ಹುಡುಗರು ಬೇಕಾಗಿದ್ದಾರೆ. ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ವಿದ್ಯಾರ್ಹತೆ : SSLC ಉತ್ತೀರ್ಣ, ಸಂಪರ್ಕಿಸಿ :
96860 22969

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**Requirement**
Receptionist (only female)
Age: 20-25, Salary: 10,000 - 15,000
HAIRPOINT SALON
MCC `B' block, 7th main 3rd cross, Davanagere.
9148319342, 9738664400
08192220755

**ಬೇಕಾಗಿದ್ದಾರೆ**
Ace Tractor Showroomಗಾಗಿ ಅಕೌಂಟೆಂಟ್ (ಮಹಿಳೆಯರು) ಟ್ಯಾಲಿ ಕಲಿತವರು ಹಾಗೂ ಅನುಭವವುಳ್ಳವರಿಗೆ ಆದ್ಯತೆ ಮತ್ತು Diploma in Automobile / Mechanical ಆಗಿರುವವರು ಸೇಲ್ಸ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಹಾಗೂ ದ್ವಿಚಕ್ರ ವಾಹನ ಹೊಂದಿದವರಿಗೆ ಆದ್ಯತೆ.
80952 54434

**ಬಾಡಿಗೆಗೆ ಇದೆ**
ದಾವಣಗೆರೆ-ಹರಿಹರ ರಸ್ತೆಯ ಮಧ್ಯದಲ್ಲಿರುವ ದೊಡ್ಡಬಾತಿ ಗ್ರಾಮದಲ್ಲಿ ರೈಲ್ವೆ ಗೂಡ್ಸ್ ಹತ್ತಿರ 5 ಗೋಡೌನುಗಳು ಬಾಡಿಗೆಗೆ ಇವೆ.
99451 49133

**FOR LEASE**
ಡಿ.ನಂ. 3100/51, ನೂತನ ಕಾಲೇಜು ರಸ್ತೆ, ವಿವೇಕಾನಂದ ಬಡಾವಣೆ, 34ನೇ ವಾರ್ಡ್ , 7th C, ಶಿವ ಶಕ್ತಿ ಬ್ಲಾಕ್, ಅಳತೆ 30 X 50 ಅಡಿ, ಉತ್ತರಾಭಿಮುಖ, 1ನೇ ಮಹಡಿ ಡಬಲ್ ಬೆಡ್‌ರೂಮ್, 2ನೇ ಮಹಡಿ 3 ಬೆಡ್‌ರೂಮ್ ಮನೆ, ಮುನ್ಸಿಪಲ್ ನೀರು, ಬೋರ್‌ವೆಲ್ ನೀರು ಇರುವ ಮನೆ ಲಭ್ಯವಿದೆ.
95387 32909, 98444 56243

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, PJ ಬಡಾವಣೆ ದಾವಣಗೆರೆ.

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋ ರೂಮ್‌ಗೆ ಬೇಕಾಗಿದ್ದಾರೆ. ದರ್ಶನ್ ಆರ್ಕೇಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಸಂಪರ್ಕಿಸಿ :
08192 224842
ಸಮಯ : 11Am to 6Pm ಬರುವಾಗ ದಯವಿಟ್ಟು ಪೋಟೋ, ಬಯೋಡೇಟಾ ತನ್ನಿ.

**TUITIONS**
CBSE / ICSE Boards Class 8th, 9th, 10th
CRASH COURSES FOR NEET / CET / IIT - JEE PUC I / PUC II / PCMB
NEET Long Term / Supplementary Exams
97398 65711, 94822 44114

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿ, 2 BHK ಜೆ.ಹೆಚ್. ಪಟೇಲ್ ಬಡಾವಣೆ 'ಸಿ' ಬ್ಲಾಕ್, 2ನೇ ಮೇನ್ ಶಾಮನೂರು.
98863 84948

**ಶ್ರೀ ಸಾಯಿ ಕ್ಯಾಟರಿಂಗ್**
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಅಡುಗೆ ಮಾಡಿ ಕೊಡಲಾಗುವುದು. ಸಂಪರ್ಕಿಸಿ :
94489 24273

**ಬೇಕಾಗಿದ್ದಾರೆ**
ಅನುಭವವುಳ್ಳ ಇಂಜಿನಿಯರ್, ಲೇಔಟ್ ಪ್ಲಾನ್ ಹಾಕುವವರು Girls / Boys ಆಕರ್ಷಕ ಸಂಬಳ ಕೊಡುತ್ತೇವೆ. Computer Cad ಹಾಕುವವರು.
99640 05604
96633 12721, 76766 96963

**3BHK HOUSE FOR RENT**
At Uttam Badavane, 1st main, B ward No - 30, Avaragere Road. Contact :
99015 64535
94498 04535

# ನಗರದ ದೊಡ್ಡಪೇಟೆಯಲ್ಲಿ ಇಂದಿನಿಂದ ಶ್ರೀ ಪಾಂಡುರಂಗ ವಿಠ್ಠಲ ರುಕ್ಮಿಣಿ ದಿಂಡಿ ಉತ್ಸವ

ದಾವಣಗೆರೆ, ನ. 24- ನಾಮದೇವ ಸಿಂಪಿ ಸಮಾಜದಿಂದ ನಾಳೆ ದಿನಾಂಕ 25 ರಿಂದ 27ರವರೆಗೆ 99ನೇ ಶ್ರೀ ಪಾಂಡುರಂಗ ವಿಠ್ಠಲ ರುಕ್ಮಿಣಿ ದಿಂಡಿ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ನಾಮದೇವಿ ಸಿಂಪಿ ಸಮಾಜ ದೈವ ಮಂಡಳಿಯ ಅಧ್ಯಕ್ಷ ವಿಠ್ಠಲ್ ಎಂ.ಎಸ್. ಹೇಳಿದ್ದಾರೆ.



ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 25ರ ಸೋಮವಾರ ದೊಡ್ಡಪೇಟೆ ಶ್ರೀ ನಾಮದೇವ ಭಜನಾ ಮಂದಿರದಲ್ಲಿ ಬೆಳಿಗ್ಗೆ 5 ಗಂಟೆಯಿಂದ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.

ಸಂಜೆ 5 ರಿಂದ 6ರವರೆಗೆ ಹಾಗೂ ಸಂಜೆ 8 ರಿಂದ 10ವರೆಗೆ ಸನ್ಮಾನ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ನಡೆಯಲಿವೆ. ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಹಾಗೂ ಬಿಜೆಪಿ ಕೈಗಾರಿಕಾ ಪ್ರಕೋಷ್ಟದ ರಾಜ್ಯ ಸಂಚಾಲಕ ಕೆ.ಬಿ. ಕೊಟ್ರೇಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕನ್ನಡ ಉಪನ್ಯಾಸಕ ಬಸವರಾಜ ಹನುಮಲಿ ಮುಖ್ಯ ಭಾಷಣಕಾರರಾಗಿ ಆಗಮಿಸಲಿದ್ದಾರೆ.

ದಿನಾಂಕ 26ರ ಮಂಗಳವಾರ ಬೆಳಿಗ್ಗೆ ಧಾರ್ಮಿಕ ಕಾರ್ಯಕ್ರಮಗಳು, ಸಂಜೆ 4.30ಕ್ಕೆ ಶ್ರೀ ವಿಠ್ಠಲ ರುಖುಮಾಯಿ ಉತ್ಸವ, ಮೂರ್ತಿ ಮೆರವಣಿಗೆ, ನಂತರ ಕುಂಭೋತ್ಸವ, ಕೀರ್ತನೆ, ಭಜನೆ ಕಾರ್ಯಕ್ರಮಗಳು ನಡೆಯಲಿವೆ.

ದಿನಾಂಕ 27ರಂದು ಪಿ.ಬಿ. ರಸ್ತೆಯಲ್ಲಿರುವ ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪ ಧರ್ಮಶಾಲೆಯಲ್ಲಿ ಬೆಳಿಗ್ಗೆ 9 ರಿಂದ ರಂಗೋಲಿ ಕಾರ್ಯಕ್ರಮ, ಸಾಂಸ್ಕೃತಿಕ ಹಾಗೂ ವೇಷ ಭೂಷಣ ಸ್ಪರ್ಧೆ, ಭಕ್ತಿಗೀತೆ ಸ್ಪರ್ಧೆ, ನೃತ್ಯ ಕಾರ್ಯಕ್ರಮಗಳು ನಡೆಯಲಿವೆ. 12.30ರಿಂದ ಸಭಾ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ದೂಡ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಶ್ರೀ ನಾಮದೇವ ಭಜನಾ ಮಂಡಳಿ, ಸಂತ ಸಕ್ಕೂಬಾಯಿ ಮಹಿಳಾ ಮಂಡಳಿ, ಶ್ರೀ ನಾಮದೇವ ತರುಣ ಮಂಡಳಿ, ಶ್ರೀ ನಾಮದೇವ ಭಜನಾ ಮಂದಿರ ನಿರ್ವಹಣಾ ಸಮಿತಿ ಹಾಗೂ ಶ್ರೀ ವಿಠ್ಠಲ ರುಕ್ಮಿಣಿ ಸಮುದಾಯ ಭವನ ನೂತನ ಕಟ್ಟಡ ನಿರ್ಮಾಣ ಸಮಿತಿ ಸಹಯೋಗದಲ್ಲಿ ಈ ಎಲ್ಲಾ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ನಾಮದೇವ ಸಿಂಪಿ ಸಮಾಜ ದೈವ ಮಂಡಳಿಯ ಗೌರವಾಧ್ಯಕ್ಷ ಜ್ಞಾನದೇವ ಬೊಂಗಾಳೆ, ಪ್ರಧಾನ ಕಾರ್ಯದರ್ಶಿ ಮನೋಹರ ವಿ.ಬೊಂಗಾಳೆ, ಉಪಾಧ್ಯಕ್ಷ ಅಶೋಕ ಮಾಳೋದೆ, ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಕಂಚಿಕೆರೆ ಉಪಸ್ಥಿತರಿದ್ದರು.

# ಮಹಿಳೆಯರು ಇನ್ನೂ ಸಬಲರಾಗಬೇಕು

## ಎನ್‌ಎಫ್‌ಐಡಬ್ಲ್ಯು ಶಿಬಿರದಲ್ಲಿ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು

ದಾವಣಗೆರೆ, ನ.24- ಈಗಾಗಲೇ ಮಹಿಳೆಯರು ಸಬಲೀಕರಣದತ್ತ ದಾಪುಗಾಲು ಇಡುತ್ತಿದ್ದಾರೆ ಇದು ಸಾಲದು, ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಭಾಗವಹಿಸುವುದರ ಮೂಲಕ ಮತ್ತಷ್ಟು ಸಬಲರಾಗಬೇಕೆಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ ಆವರಗೆರೆ ಚಂದ್ರು ಹೇಳಿದರು.




ಇಲ್ಲಿನ ಕಾಂ. ಪಂಪಾಪತಿ ಭವನದಲ್ಲಿ ಎನ್.ಎಫ್.ಐ.ಡಬ್ಲ್ಯು. ಮಹಿಳಾ ಒಕ್ಕೂಟದ ಮಹಿಳೆಯರ ಅಧ್ಯಯನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಇತ್ತೀಚೆಗೆ ಸಂಘ-ಸಂಸ್ಥೆಗಳಿಂದ ಮತ್ತು ಬ್ಯಾಂಕುಗಳಿಂದ ಸಾಲ ಸವಲತ್ತು ಪಡೆಯುವುದರ ಮೂಲಕ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಆದರೆ ಇದು ಸಾಲದು ಸಮಾಜದ ವಿವಿಧ ಸ್ತರಗಳ ಕ್ಷೇತ್ರಗಳಲ್ಲಿ ಮಹಿಳೆಯರು ಸರಿಸಮನಾಗಿ ಭಾಗವಹಿಸಬೇಕೆಂದು ಕರೆ ನೀಡಿದರು.

ಸಿಪಿಐ ಜಿಲ್ಲಾ ಸಹಕಾರ್ಯದರ್ಶಿ ಹೆಚ್.ಜಿ. ಉಮೇಶ್, ಜಿಲ್ಲಾ ಖಜಾಂಚಿ ಮಹಮ್ಮದ್ ರಫೀಕ್, ಟ್ರಸ್ಟ್ ಸಹಕಾರ್ಯದರ್ಶಿ ಮಹಮ್ಮದ್ ಭಾಷಾ ಜಗಳೂರು, ಮುಖಂಡರಾದ ಜಿ. ಯಲ್ಲಪ್ಪ ಶಿಬಿರ ವನ್ನು ಉದ್ದೇಶಿಸಿ ಮಾತನಾಡಿ ಶುಭ ಕೋರಿದರು.

ಉದ್ಘಾಟನಾ ಶಿಬಿರದ ಅಧ್ಯಕ್ಷತೆಯನ್ನು ಎನ್‌ಎಫ್‌ಐಡಬ್ಲ್ಯು ರಾಜ್ಯ ಸಮಿತಿ ಸದಸ್ಯರಾದ ಹೊನ್ನಾಳಿ ಚನ್ನಮ್ಮ ವಹಿಸಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ಎಸ್. ಮಲ್ಲಮ್ಮ, ಜಿಲ್ಲಾ ಖಜಾಂಚಿ ಸರೋಜಾ ಸೇರಿದಂತೆ ಇತರರು ಸಮಾರಂಭದ ವೇದಿಕೆಯಲ್ಲಿದ್ದರು.

ಎನ್‌ಎಫ್‌ಐಡಬ್ಲ್ಯು ರಾಜ್ಯ ಅಧ್ಯಕ್ಷೆ ಎ. ಜ್ಯೋತಿ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ ರೇಣುಕಮ್ಮ ಶಿಬಿರ ನಡೆಸಿಕೊಟ್ಟರು. ಇಪ್ಟಾ ಕಲಾವಿದರಾದ ಕೆ. ಬಾನಪ್ಪ, ಶ್ಯಾಗಲೆ ಶರಣಪ್ಪ, ಲೋಕಿಕೆರೆ ರುದ್ರೇಶ್ ಮಹಿಳೆಯರ ಕುರಿತು ಗೀತೆಗಳನ್ನು ಹಾಡಿದರು. ಎ.ಐ.ವೈ.ಎಫ್. ಮುಖಂಡರಾದ ಕೆರನಹಳ್ಳಿ ರಾಜು, ಎ. ತಿಪ್ಪೇಶ್, ದಾದಾಪೀರ್, ಸಿ. ರಮೇಶ್ ಸೇರಿದಂತೆ ಇತರರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಎನ್‌ಎಫ್‌ಐಡಬ್ಲ್ಯು ಮುಖಂಡರುಗಳಾದ ಹೊಸಳ್ಳಿ ಮಂಜುಳಾ, ಎಂ.ಆರ್. ಸುಮ, ಕೆ.ಸಿ. ನಿರ್ಮಲ, ಗೀತಾ, ಸುಶೀಲ, ವಿಜಯಕುಮಾರಿ, ಹೊನ್ನಾಳಿ ರೇಣುಕಮ್ಮ ಅಧ್ಯಯನ ಶಿಬಿರ ಸಂಘಟಿಸಿದ್ದರು.

# ಧರ್ಮಗಳ ನಡುವೆ ವಿಶ್ವಾಸ ಬೆಳೆಯಲಿ

## ಜಿಲ್ಲಾ ಶಿಶು ಕಲ್ಯಾಣ ಮಂಡಳಿಯ ಮಕ್ಕಳ ಮೇಳ ಕಾರ್ಯಕ್ರಮದಲ್ಲಿ ಚಮನ್ ಸಾಬ್

ದಾವಣಗೆರೆ, ನ. 24- ಎಲ್ಲಾ ಧರ್ಮಗಳೂ ಮಾನವನ ಒಳಿತನ್ನೇ ಬಯಸುತ್ತವೆ. ಧರ್ಮ-ಧರ್ಮಗಳ ನಡುವೆ ವಿಶ್ವಾಸ ಬೆಳೆಯಬೇಕಿದೆ ಎಂದು ಮಹಾನಗರ ಪಾಲಿಕೆ ಮೇಯರ್ ಕೆ.ಚಮನ್ ಸಾಬ್ ಆಶಿಸಿದರು.



ಜಿಲ್ಲಾ ಶಿಶು ಕಲ್ಯಾಣ ಮಂಡಳಿಯಿಂದ ನಗರದ ವನಿತಾ ಸಮಾಜದ ಶ್ರೀ ಸತ್ಯಸಾಯಿ ರಂಗ ಮಂದಿರದಲ್ಲಿ ಭಾನುವಾರ ಸಂಜೆ ಮಕ್ಕಳ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಮಕ್ಕಳ ಮೇಳ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶಿಕ್ಷಣದಲ್ಲೂ ಧರ್ಮ ಬೆರೆತು, ಇಂದು ಶಿಕ್ಷಣವೂ ಕಲುಷಿತವಾಗಿದೆ. ಧಾರ್ಮಿಕ ಮೂಲ ಭೂತವಾದಿಗಳು ಧರ್ಮಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ, ಧರ್ಮ-ಧರ್ಮಗಳ ನಡುವೆ ಒಡಕು ಮೂಡಿಸುತ್ತಿದ್ದಾರೆ. ಇದಕ್ಕೆ ಜನರು ಕಿವಿಗೊಡಬಾರದು ಎಂದು ಹೇಳಿದರು.

ನೆಹರು ಅವರು ದೇಶಕ್ಕಾಗಿ 9 ವರ್ಷ ಜೈಲು ವಾಸ ಅನುಭವಿಸಿದರು. ಆದರೆ ಈಗ 9 ಗಂಟೆ ದೇಶಕ್ಕಾಗಿ ಸಮಯ ನೀಡದವರು ಸುಳ್ಳು ಹೇಳುತ್ತಾ ವಿಜೃಂಭಿಸುತ್ತಿದ್ದಾರೆ. ಜನರು ಇತಿಹಾಸ ಓದಬೇಕು. ಸತ್ಯವನ್ನು ಅರಿಯಬೇಕು ಎಂದರು.

ನಾಗಮ್ಮ ಕೇಶವಮೂರ್ತಿ ಹಾಗೂ ಸಿ. ಕೇಶವಮೂರ್ತಿ ಅವರ ಜೊತೆ ನನಗೆ ಒಡನಾಟವಿತ್ತು ಎಂದ ಚಮನ್ ಸಾಬ್, ಅವರು ಮಾಡಿದ ಸೇವೆಯನ್ನು ಇಂದು ನಾವೆಲ್ಲಾರೂ ನೆನೆಯುತ್ತೇವೆ. ಯಾರು ಸಮಾಜಕ್ಕಾಗಿ ತ್ಯಾಗ ಮಾಡುತ್ತಾರೋ, ಅವರನ್ನು ಇತಿಹಾಸ ಸ್ಮರಿಸುತ್ತದೆ. ಅದಕ್ಕೆ ಉದಾಹರಣೆ ನಾಗಮ್ಮ ಎಂದರು.

ನೆಹರು ಅವರು ಬರೆದಷ್ಟು ಪುಸ್ತಕಗಳನ್ನು ಯಾವ ರಾಜಕಾರಣಿಯೂ ಇದುವರೆಗೆ ಬರೆದಿಲ್ಲ. ಮುಂದೆಯೂ ಬರೆಯುವುದಿಲ್ಲ. ಕೇವಲ ನೆಹರೂ ಅವರ ಭಾವಚಿತ್ರಕ್ಕೆ ಹಾರ ಹಾಕಿ ಮಕ್ಕಳ ದಿನಾಚರಣೆ ಆಚರಿಸಿದರೆ ಸಾಲದು, ಅವರ ಪುಸ್ತಕಗಳನ್ನು ಓದುವ ಮೂಲಕ ನೆಹರೂ ಅವರನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ದೂಡ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಸ್ವಾತಂತ್ರ್ಯಾ ನಂತರವೂ ದೇಶ ಅನೇಕ ಒಕ್ಕೂಟಗಳಾಗಿತ್ತು. ಅವುಗಳನ್ನೆಲ್ಲಾ ಒಗ್ಗೂಡಿಸಿದ ಕೀರ್ತಿ ನೆಹರೂ ಅವರದ್ದು. ದೇಶದಾದ್ಯಂತ ಉತ್ತಮ ರಸ್ತೆ, ಬ್ರಿಡ್ಜ್‌ಗಳು, ಕಾಲೇಜುಗಳನ್ನು ನಿರ್ಮಿಸಿ ದೇಶವನ್ನು ಅಭಿವೃದ್ಧಿ ಪಥದತ್ತ ನೆಹರು ಕೊಂಡೊಯ್ದಿದ್ದರು ಎಂದು ಹೇಳಿದರು.

ಸರ್ಕಾರಿ ಶಾಲೆಯಲ್ಲಿ ಓದಿದ ಶೇ.80ರಷ್ಟು ಮಂದಿಯೇ ಇಂದು ಉತ್ತಮ ಹುದ್ದೆಗಳಲ್ಲಿದ್ದಾರೆ. ವಿದ್ಯಾರ್ಥಿ ಜೀವನದಲ್ಲಿ ಶ್ರಮ ವಹಿಸಿದರೆ ಭವಿಷ್ಯ ಉಜ್ವಲವಾಗುತ್ತದೆ. ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳು ತಮ್ಮ ವಿದ್ಯಾಭ್ಯಾಸದ ಜೊತೆ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಯಲ್ಲೂ ಪಾಲ್ಗೊಳ್ಳಬೇಕು. ಆಸಕ್ತಿ ಇರುವ ಕ್ಷೇತ್ರದಲ್ಲಿ ಹೆಚ್ಚಿನ ಶ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

ನಾಗಮ್ಮ ಕೇಶವಮೂರ್ತಿ ಅವರು ದಾವಣಗೆರೆ ಜಿಲ್ಲೆಯ ಮದರ್ ಥೆರೇಸಾ ಇದ್ದಂತೆ. 52 ಸಂಸ್ಥೆಗಳನ್ನು ಕಟ್ಟಿ ವಿವಿಧೆಡೆಯಿಂದ ಅನುದಾನ ತಂದು ಬೆಳೆಸಿದರು. ಆಡಿಟೋರಿಯಂ ನಿರ್ಮಿಸುವುದು ಅವರ ನಾಗಮ್ಮ ಕೇಶವಮೂರ್ತಿ ಅವರ ಆಸೆಯಾಗಿತ್ತು. ಇದೀಗ ಅದರ ನಿರ್ಮಾಣಕ್ಕೆ ಪ್ರಯತ್ನ ನಡೆಯುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿದ್ಧಗಂಗಾ ಕಾಂಪೋಜಿಟ್ ಪ್ರೌಢಶಾಲೆಯ ವಿದ್ಯಾರ್ಥಿನಿ ಕು. ಯಶಸ್ವಿನಿ ಕೆ.ಪಿ. ಅವರಿಗೆ ವರ್ಷದ ಉತ್ತಮ ಪ್ರೌಢಶಾಲೆ ವಿದ್ಯಾರ್ಥಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಉಷಾ ರಂಗನಾಥ್ ಅತಿಥಿಗಳನ್ನು ಸ್ವಾಗತಿಸಿದರು. ಸುನೀತಾ ವೀರನಾರಾಯಣ ಅತಿಥಿಗಳನ್ನು ಪರಿಚ ಯಿಸಿದರು. ಶೋಭಾ ರವಿ ಹಾಗೂ ನಾಗಶ್ರೀ ಬಹುಮಾನ ವಿತರಣೆ ನಡೆಸಿಕೊಟ್ಟರು. ಗಾಯತ್ರಿ ಜಗನ್ನಾಥ್ ನಿರೂಪಿಸಿದರೆ, ಪ್ರಭಾ ರವೀಂದ್ರ ವಂದಿಸಿದರು.

### ತಾಲ್ಲೂಕು ಕಚೇರಿ ಉದ್ಘಾಟನೆಗೆ ಒತ್ತಾಯ

ನವೀಕರಣಗೊಂಡಿರುವ ದಾವಣಗೆರೆ ತಾಲ್ಲೂಕು ಕಚೇರಿಯನ್ನು ಕೂಡಲೇ ಉದ್ಘಾಟಿಸುವಂತೆ ಒತ್ತಾಯಿಸಿ, ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಜಯದೇವ ವೃತ್ತದಿಂದ ಉಪವಿಭಾಗಾಧಿಕಾರಿ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ಬಾಬುರಾವ್ ತಿಳಿಸಿದ್ದಾರೆ.

### ಚಿತ್ರದುರ್ಗದಲ್ಲಿ ಅಯ್ಯಪ್ಪ ಸ್ವಾಮಿ ಬ್ರಹ್ಮೋತ್ಸವ

ಚಿತ್ರದುರ್ಗ, ನ.24- ಮೆದೆಹಳ್ಳಿ ರಸ್ತೆಯಲ್ಲಿ ರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ 25ನೇ ವರ್ಷದ 60 ದಿನಗಳ ಬ್ರಹ್ಮೋತ್ಸವವು ನಿನ್ನೆ ಆರಂಭಗೊಂಡಿದ್ದು, ಬರುವ ಜನವರಿ 13ರವರೆಗೆ ನಡೆಯಲಿದೆ. ಮಾಲಾಧಾರಿ ಗಳಿಗೆ ದೇವಸ್ಥಾನದಲ್ಲಿ ಪ್ರತಿನಿತ್ಯ ಉಚಿತ ಅನ್ನದಾನ ಕಾರ್ಯಕ್ರಮ ಜರುಗಲಿದೆ. ಡಿಸೆಂಬರ್ 18ರ ಬುಧವಾರ ಸಂಜೆ 7ಕ್ಕೆ ಮೆಟ್ಟಿಲು ಪೂಜೆ, 22ಕ್ಕೆ ಅಯ್ಯಪ್ಪ ಸ್ವಾಮಿ ದೇವ ಸ್ಥಾನದ ಆವರಣದಲ್ಲಿ ಮಹಾ ಅನ್ನದಾನ ಕಾರ್ಯ ಕ್ರಮ ಜರುಗಲಿದೆ. ಜನವರಿ 13ರ ಸೋಮವಾರ ಸಂಜೆ 6ಕ್ಕೆ ನಗರದಲ್ಲಿ ಅಯ್ಯಪ್ಪ ಸ್ವಾಮಿಯ ಆಭರಣ ಮೆರವಣಿಗೆ ಆಯೋಜಿಸಿದೆ.

ಜನವರಿ 14 ರಂದು ಮಕರ ಸಂಕ್ರಮಣದ ಅಂಗವಾಗಿ ಸ್ವಾಮಿ ಸನ್ನಿಧಿಯಲ್ಲಿ ಲಕ್ಷ ದೀಪೋತ್ಸವ ನಡೆಯಲಿದೆ.

### ಕೆ.ಆರ್. ವಸಂತ ಅವರಿಗೆ ಪ್ರಶಸ್ತಿ



ದಾವಣಗೆರೆ, ನ.24- ನಗರದ ಆಂಜನೇಯ ಬಡಾವಣೆಯ ರಂಗೋಲಿ ಕಲಾ ಸಂಪನ್ನೆ ಶ್ರೀಮತಿ ವಸಂತ ಕೆ.ಆರ್. ಅವರಿಗೆ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯು ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ನೀಡಲಾಗುವ 'ಕರ್ನಾಟಕ ಮುಕುಟ ಮಣಿ' ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಿದೆ.

# ಸಿದ್ದು ಕಿರೀಟಕ್ಕೆ ಮತ್ತೊಂದು ಗರಿ, ಸಿದ್ದು ಕೆಣಕಿದ್ದಕ್ಕೆ ಜನರಿಂದ ತಕ್ಕ ಉತ್ತರ

ಚಿತ್ರದುರ್ಗ, ನ.24- ಸಿದ್ದರಾಮಯ್ಯ ನಾಡು ಕಂಡ ಅಪರೂಪದ ನಾಯಕ, 40 ವರ್ಷಗಳ ನಿಷ್ಕಳಂಕ ರಾಜಕಾರಣ ಮಾಡಿದ ಮುತ್ಸದ್ಧಿ. ಆದರೆ, ಅವರ ಹೆಸರಿಗೆ ಕಳಂಕ ತರಲು ಅನಗತ್ಯವಾಗಿ ಮುಡಾ ವಿಷಯ ಮುನ್ನೆಲೆಗೆ ತಂದ ಪ್ರತಿಪಕ್ಷಗಳ ನಡೆಗೆ ಜನಾಕ್ರೋಶ ಮೂರು ಉಪ ಚುನಾವಣೆಯಲ್ಲಿ ಹೊರಬಿದ್ದಿದೆ ಎಂದು ಮಾಜಿ ಸಚಿವ, ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಹೇಳಿದ್ದಾರೆ.



ಸದಾ ಅಹಿಂದ ವರ್ಗದ ಹಿತ ಬಯಸುವ ಸಿದ್ದರಾಮಯ್ಯ, ಎಲ್ಲಾ ಸಮುದಾಯದ ಹಿತಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಯಶಸ್ಸು ಕಂಡಿದ್ದಾರೆ. ಆದರೆ, ಇದನ್ನು ಸಹಿಸದೆ, ಸಿದ್ದರಾಮಯ್ಯ ಅವರನ್ನು ಕೆಣಕುವ ಪ್ರಯತ್ನ ನಡೆಸಿ, ಮತದಾರರಿಂದ ಪ್ರತಿಪಕ್ಷಗಳು ಮಂಗಳಾರತಿ ಮಾಡಿಸಿಕೊಂಡಿವೆ ಎಂದಿದ್ದಾರೆ.

ಮುಡಾ ಹೆಸರಲ್ಲಿ ಹಗರಣ ನಡೆದಿದೆ ಎಂದು ಸುಳ್ಳು ಸುದ್ದಿ ಹರಡಿ, ಸಿದ್ದರಾಮಯ್ಯ ಮತ್ತು ಅವರ ಕುಟುಂಬಕ್ಕೆ ಮಾನಸಿಕ ಹಿಂಸೆ ನೀಡುವ ಯತ್ನ ಹಾಗೂ ಅಹಿಂದ ನಾಯಕನೊಬ್ಬ ಎರಡನೇ ಬಾರಿ ಸಿಎಂ ಆಗಿ ಅವಧಿ ಪೂರ್ಣಗೊಳಿಸುವ ಪ್ರಯತ್ನಕ್ಕೆ ಅಡ್ಡಿಪಡಿಸುವ ಪ್ರತಿಪಕ್ಷಗಳ ಷಡ್ಯಂತ್ರ ವನ್ನು ಸಹಿಸಿಕೊಳ್ಳುವುದಿಲ್ಲವೆಂಬ ಸಂದೇಶವನ್ನು ಮತದಾರರೇ ರವಾನಿಸಿದ್ದಾರೆ.

ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್ ಹಾಗೂ ಐದು ಗ್ಯಾರಂಟಿಗಳು ಜಾರಿ ಹಾಗೂ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನ ಭಾವಚಿತ್ರ ಅಳವಡಿಸುವ ಆದೇಶ ಸೇರಿ ಅನೇಕ ಕ್ರಾಂತಿಕಾರಿ ನಡೆ ಕೈಗೊಂಡ ಸಿದ್ದರಾಮಯ್ಯ ನಾಯಕತ್ವ ಪ್ರಶ್ನಾತೀತ ಎಂಬ ಸಂದೇಶವನ್ನು ಜನರು ಫಲಿತಾಂಶದ ಮೂಲಕ ಸಾರಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಆಗಿದ್ದ ವಕ್ಫ್ ಮಂಡಳಿ ಆದೇಶ, ಕೇಂದ್ರ ಸರ್ಕಾರದ ಸೂಚನೆ, ಕಾರಣಕ್ಕೆ ರಾಜ್ಯದಲ್ಲಿ ಅನೇಕರ ಬಿಪಿಎಲ್ ಪಡಿತರ ಚೀಟಿ ರದ್ದು ವಿಷಯವನ್ನು ಕಾಂಗ್ರೆಸ್ ಪಕ್ಷವೇ ನಡೆಸಿದೆ ಎಂದು ಸುಳ್ಳು ಆರೋಪ ಮಾಡಿ, ಜನರನ್ನು ಎತ್ತಿಕಟ್ಟುವ ಯತ್ನಕ್ಕೆ ಮತದಾರ ಸೊಪ್ಪು ಹಾಕಿಲ್ಲ. ಸತ್ಯವನ್ನಷ್ಟೇ ನಾವು ಒಪ್ಪಿಕೊಳ್ಳುವುದು ಎಂಬ ಸಂದೇಶವನ್ನು ಮತದಾರರು ನೀಡಿದ್ದಾರೆ.

# ಪಾರಂಪರಿಕ ಶಿಕ್ಷಣ ವಿಧಾನದೊಂದಿಗೆ ಆಧುನಿಕ ಸಾಧನಗಳ ಬಳಕೆ ಪರಿಣಾಮಕಾರಿ : ಪತ್ರಕರ್ತ ಹೆಚ್.ಬಿ.ಮಂಜುನಾಥ್

ದಾವಣಗೆರೆ, ನ.24- ಶಾಲೆಗಳಲ್ಲಿ ಮಕ್ಕಳಿಗೆ ಪಾಠಗಳನ್ನು ಬಾಯಲ್ಲಿ ಹೇಳುವುದು ಪಾರಂಪರಿಕ ವಿಧಾನವಾಗಿದ್ದು, ಇದಕ್ಕೆ ಪೂರಕವಾಗಿ ದೃಶ್ಯಗಳನ್ನೂ ತೋರಿಸಿದಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಇದಕ್ಕಾಗಿ ಆಧುನಿಕ ದೃಶ್ಯ ಸಾಧನಗಳ ಬಳಕೆ ಅವಶ್ಯ ಎಂದು ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ ಹೇಳಿದರು.




### ಶಾಲೆಗೆ ಟಿವಿ ವಿತರಿಸಿದ ಭಾರತ ವಿಕಾಸ ಪರಿಷತ್

ಭಾರತ ವಿಕಾಸ ಪರಿಷತ್ತಿನ ದಾವಣಗೆರೆ ಗೌತಮ ಶಾಖೆಯ ವತಿಯಿಂದ ನಗರದ ಹಳ್ಳಿ ಮಹಾದೇವಪ್ಪ ಶಾಲೆಗೆ ಸ್ಮಾರ್ಟ್ ಟಿವಿ ಪ್ರದಾನ ಮಾಡುವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಭಾರತದಲ್ಲಿ ಒಟ್ಟು ಸುಮಾರು 29 ಕೋಟಿ 80 ಲಕ್ಷ ಮನೆಗಳಿದ್ದು, 19 ಕೋಟಿ 70 ಲಕ್ಷದಷ್ಟು ಟಿವಿ ಸೆಟ್‌ಗಳಿವೆ. ಬಹುತೇಕ ಇವೆಲ್ಲವೂ ಮನರಂಜನೆಗಾಗಿಯೇ ಬಳಕೆಯಾಗುತ್ತಿವೆ. ಆದರೆ, ಶಾಲೆಗಳಲ್ಲಿ ಸ್ಮಾರ್ಟ್ ಟಿವಿಯನ್ನು ಬಳಸಿ ಮಕ್ಕಳಿಗೆ ಪಠ್ಯಕ್ಕೆ ಪೂರಕವಾದ ದೃಶ್ಯಗಳನ್ನು ತೋರಿಸುತ್ತಾ ಪಾಠ ಮಾಡಿದಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಮತ್ತು ಮಕ್ಕಳಿಗೆ ಸುಲಭವಾಗಿ ಅರ್ಥವಾಗುವುದರ ಜೊತೆಗೆ ರಂಜನೆಯೂ ಇರುತ್ತದೆ ಎಂದರು. ನಮ್ಮ ದೇಶದಲ್ಲಿ 1959ರ ವೇಳೆಗೆ ಮೊದಲ ಟಿವಿ ಪ್ರಸಾರ ಆರಂಭವಾಗಿದ್ದು, 1961ರ ವೇಳೆಗೆ 'ಸ್ಕೂಲ್ ಎಜುಕೇಶನಲ್ ಟಿವಿ ಪ್ರಾಜೆಕ್ಟ್' ಅಂದರೆ ಶಾಲಾ ಶಿಕ್ಷಣದಲ್ಲಿ ಟಿವಿ ಬಳಕೆ ಯೋಜನೆ ಜಾರಿಗೆ ಬಂದಿತ್ತು. ಆದರೆ, ಈಗಿನ ಸ್ಮಾರ್ಟ್ ಟಿವಿಗಳು ಇದಕ್ಕೆ ಅತ್ಯಂತ ಯೋಗ್ಯವಾಗಿವೆ. ಇದರ ಸದ್ಬಳಕೆ ಆಗಬೇಕು ಎಂದರು.

ಭಾರತ ವಿಕಾಸ ಪರಿಷತ್ ಗೌತಮ ಶಾಖೆಯ ಅಧ್ಯಕ್ಷ ಎ.ಎಸ್.ವಿಜಯಕುಮಾರ್ ಅಧ್ಯಕ್ಷತೆಯಲ್ಲಿ ಪರಿಷತ್ತಿನ ದಕ್ಷಿಣ ವಲಯ ಸಹಕಾರ್ಯದರ್ಶಿ ಅರುಣ್ ಜೆ. ಘಾಟ್ಗೆ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ದಾನಿ ಜಯಪ್ರಕಾಶ್ ಮಾಗಿ, ಪರಿಷತ್ತಿನ ಟಿ. ಎಸ್.ಜಯರುದ್ರೇಶ್, ಹಿರಿಯ ಸಮಾಜ ಸೇವಕ ಕೆ. ಬಿ.ಶಂಕರನಾರಾಯಣ, ಪರಿಷತ್ತಿನ ಕೋಶಾಧ್ಯಕ್ಷೆ ವೀಣಾ ಎಂ.ಜಿ, ಪುಟ್ಟಪ್ಪ ಕಾಶಪ್ಪ, ವಿಜಯೇಂದ್ರ, ಶಂಭುಲಿಂಗಪ್ಪ ಮುಂತಾದವರು ಉಪಸ್ಥಿತರಿದ್ದರು.

ಡಾ.ಆರತಿ ಸುಂದರೇಶ್ ನಿರೂಪಿಸಿದ ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಭವಾನಿ ಶಂಭುಲಿಂಗಪ್ಪ, ಶೀಲಾ ನಾಯಕ್ ಹಾಡಿದರು. ಸ್ವಾಗತವನ್ನು ಪರಿಷತ್ತಿನ ಕಾರ್ಯದರ್ಶಿ ಎಂ. ಆರ್.ಮಧುಕರ್ ಕೋರಿದರು. ಬಸವರಾಜ್ ವಂದನೆ ಸಮರ್ಪಿಸಿದರು.

### ನಗರದಲ್ಲಿ ಇಂದು ದೀಪದಾನ ಸಮಾರಂಭ

ನೂತನ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಇಂದು ಮಧ್ಯಾಹ್ನ 3.30 ಕ್ಕೆ ಕಾಲೇಜಿನ ಉಪನ್ಯಾಸ ಕೊಠಡಿಯಲ್ಲಿ ವಿದ್ಯಾರ್ಥಿ ಸಂಘದ ಸಮಾರೋಪ ಹಾಗೂ ದೀಪದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ನೂತನ ವಿದ್ಯಾಸಂಸ್ಥೆ ಅಧ್ಯಕ್ಷ ಎನ್. ಪರಶುರಾಮನಗೌಡ ಅಧ್ಯಕ್ಷತೆ ವಹಿಸುವರು. ದಾವಣಗೆರೆ ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ.ಸಿ.ಕೆ. ರಮೇಶ್ ಸಮಾರೋಪ ಭಾಷಣ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹರಪನಹಳ್ಳಿ ಟಿಎಂಎಇಎಸ್ ಶಿಕ್ಷಣ ಮಹಾವಿದ್ಯಾಲಯದ ಮುಖ್ಯಸ್ಥ ಪ್ರೊ.ಟಿ.ಎಂ. ರಾಜಶೇಖರ್, ನೂತನ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಕೆ.ಎಸ್. ದಿವಾಕರನಾಯ್ಕ ಭಾಗವಹಿಸಲಿದ್ದಾರೆ.

### ಓದುಗರ ಪತ್ರ

#### ಮುರಿದಿರುವ ಲೈಟಿನ ಕಂಬ; ಅನಾಹುತ ತಪ್ಪಿಸಿ...



ಮಾನ್ಯರೇ,

ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರದ ಮುಂಭಾಗದಲ್ಲಿ ಇರುವ ಲೈಟಿನ ಕಂಬವು ಮೇಲ್ಭಾಗದಲ್ಲಿ ಮುರಿದಿದ್ದು, ಜೋರಾಗಿ ಗಾಳಿ ಬೀಸಿದರೆ ಯಾವ ಕ್ಷಣದಲ್ಲಾದರೂ ಬೀಳಬಹುದು. ಬಿದ್ದು ಇದರಿಂದಾಗುವ ಅನಾಹುತ ತಪ್ಪಿಸಲು ಕೂಡಲೇ ಬೆಸ್ಕಾಂ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ.

- ಕೆ.ಜಿ.ಬಸವರಾಜಪ್ಪ, ಹಿರಿಯ ನಾಗರಿಕರು, ದಾವಣಗೆರೆ.

# ಮಹಿಷಿ ವರದಿಯಿಂದ ಕನ್ನಡಿಗರಿಗೆ ಪೂರ್ಣ ಪ್ರಮಾಣದ ಉದ್ಯೋಗ

ದಾವಣಗೆರೆ, ನ. 24- ಕರ್ನಾಟಕದಲ್ಲಿ ಕನ್ನಡ ಉಳಿಸಿ, ಬೆಳೆಸಿ, ರಕ್ಷಿಸುವ ಜವಾಬ್ದಾರಿ ಎಲ್ಲಾ ಕನ್ನಡಿಗರ ಮೇಲಿದೆ. ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನಕ್ಕೆ ತಂದಾಗ ಮಾತ್ರ ಕರ್ನಾಟಕದಲ್ಲಿ ಕನ್ನಡ ಭಾಷೆ ಉಳಿಸಿ, ಬೆಳೆಸಿ, ರಕ್ಷಣೆ ಮಾಡಿ ಎಂಬ ನಿರಂತರ ಕೂಗಿಗೆ ತಡೆ ನೀಡಿದಂತಾಗು ತ್ತದೆ ಮತ್ತು ಕನ್ನಡಿಗರಿಗೆ ಸಂಪೂರ್ಣ ಉದ್ಯೋಗ ದೊರಕಲು ಸಾಧ್ಯವಾಗುತ್ತದೆ ಎಂದು ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಹೇಳಿದರು.



ನಗರದ ಶಿವಯೋಗಾಶ್ರಮದ ಆವರಣದಲ್ಲಿ, ಅಖಂಡ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ 69 ನೇ ಕರ್ನಾಟಕ ರಾಜ್ಯೋತ್ಸವ, ಕನ್ನಡ ಹಬ್ಬ, ಹಾಸ್ಯ ಸಂಜೆ ಹಾಗೂ ವಿಶೇಷ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ರಾಜ್ಯದಲ್ಲಿರುವ ಕನ್ನಡ ಪರ ಸಂಘಟನೆಗಳು ಸರೋಜಿನಿ ಮಹಿಷಿ ವರದಿ ಜಾರಿಗೆ ಹೋರಾಟ ಮಾಡುವ ಮೂಲಕ ಸರ್ಕಾರದ ಕಣ್ತೆರೆಸಬೇಕಾಗಿದೆ. ವರದಿ ಜಾರಿಯಿಂದ ಪೂರ್ಣ ಪ್ರಮಾಣದ ಉದ್ಯೋಗ ಕನ್ನಡಿಗರಿಗೇ ಸಿಗುತ್ತದೆ. ಆಂಗ್ಲಭಾಷಾ ಮೋಹ ಕೂಡ ಕಡಿಮೆಯಾಗಲು ಸಾಧ್ಯ ಎಂದರು.

'ನಮ್ಮ ನಾಡು- ನಮ್ಮ ನುಡಿ' ಕುರಿತು ಉಪನ್ಯಾಸ ನೀಡಿದ ಸುಣಕಲ್ ಬಿದರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕ ಡಾ. ಹೊನ್ನಪ್ಪ ಹೊನ್ನಪ್ಪನವರ್ ಅವರು, ಕನ್ನಡ ಭಾಷೆ ವಿಶ್ವದ ಅತ್ಯಂತ ಮೂರನೇ ಪ್ರಾಚೀನ ಭಾಷೆಯಾಗಿದೆ. ಕನ್ನಡಕ್ಕೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಆದರೆ ಕನ್ನಡಕ್ಕೆ ದುಸ್ಥಿತಿ ಬಂದಿರುವುದು ವಿಷಾದದ ಸಂಗತಿ ಎಂದರು.

### ಅಖಂಡ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಬಸವ ಪ್ರಭು ಸ್ವಾಮೀಜಿ

'ಕನ್ನಡಕ್ಕೆ ಇರಲಿ ಶ್ರೀರಕ್ಷೆ, ಇಂಗ್ಲಿಷ್ ಪಾದರಕ್ಷೆಯಾಗಿರಲಿ' ಎಂದು ಕವಿಯೊಬ್ಬರು ಹೇಳಿದ್ದನ್ನು ಉಲ್ಲೇಖಿಸಿದ ಅವರು, ಬಹಳಷ್ಟು ಪದವಿ ವಿದ್ಯಾರ್ಥಿ ಗಳಿಗೆ ಕನ್ನಡ ಭಾಷಾ ಬರವಣಿಗೆ ಗೊತ್ತಿಲ್ಲದಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ಹೇಳಿದರು.

ಇನ್ನೂ ಹತ್ತು ವರ್ಷಗಳು ಕಳೆದರೆ ಕನ್ನಡ ಶಾಲೆಗಳು ಸಂಪೂರ್ಣವಾಗಿ ಮುಚ್ಚುವ ಹಂತ ತಲುಪಿದರೂ ಅಚ್ಚರಿಪಡಬೇಕಿಲ್ಲ. ಮಾತೃಭಾಷೆಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸಿದಷ್ಟು ಅನ್ಯ ಭಾಷೆಗಳಲ್ಲಿ ಸಾಧ್ಯವಿಲ್ಲ. ಕನ್ನಡದ ಬಗೆಗಿನ ಮೇಲಿನ ಪ್ರೀತಿ ಬೆಳೆಸಿಕೊಳ್ಳಿ, ಮಕ್ಕಳಲ್ಲಿ ಕನ್ನಡ ಭಾಷೆಯ ಬೀಜವನ್ನು ಬಿತ್ತಿ ಎಂದು ಹೇಳಿದರು.

ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್.ಬಡದಾಳ್ ಮಾತನಾಡಿದರು.

ದಾವಣಗೆರೆ ಜಿಲ್ಲೆಯಲ್ಲಿ ಕೊಮಾರನಹಳ್ಳಿ, ಸಂತೇಬೆನ್ನೂರು, ನೀರ್ಥಡಿ, ಬಾಗಳಿ, ಎಲೆಬೇತೂರು, ಅಣಜಿ ಸೇರಿದಂತೆ ಇಡೀ ದಾವಣಗೆರೆ ಜಿಲ್ಲೆ ಐತಿಹಾಸಿಕ ಮಹತ್ವವನ್ನು ಹೊಂದಿ ದೆ. ಜಿಲ್ಲಾಡಳಿತ ಜನರಿಗೆ ಜಿಲ್ಲೆಯ ಐತಿಹಾಸಿಕ ಸ್ಥಳಗಳ ದರ್ಶನ ಮಾಡಿ ಸುವ ಮೂಲಕ ಇತಿಹಾಸ, ಪರಂಪರೆ, ಸಾಂಸ್ಕೃತಿಕ ಹಿನ್ನೆಲೆಯನ್ನು ಮುಂದಿನ ಪೀಳಿಗೆಗೂ ತಿಳಿಸಿಕೊಡುವ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು.

ಮೇಯರ್ ಕೆ. ಚಮನ್ ಸಾಬ್ ಮಾತನಾಡಿ, ವಿಶ್ವ ಭಾಷೆಗಳಲ್ಲಿ ಕನ್ನಡ ಸಮೃದ್ಧ ಭಾಷೆಯಾಗಿದೆ. ವಿಶ್ವದ ನಾನಾ ಮೂಲೆಗಳಲ್ಲಿರುವ ಕನ್ನಡಿಗರು ಕನ್ನಡ ರಾಜ್ಯೋತ್ಸವವನ್ನು ಪ್ರತಿ ವರ್ಷ ಸಂಭ್ರಮದಿಂದ ಆಚರಿಸುತ್ತಾರೆ. ನಾವು ಕನ್ನಡ ನಾಡಿನಲ್ಲಿದ್ದುಕೊಂಡು ಕನ್ನಡದ ಋಣವನ್ನು ತೀರಿಸುವ ಕೆಲಸ ಮಾಡಬೇಕೆಂದರು.

ನಗರಸಭೆ ಮಾಜಿ ಅಧ್ಯಕ್ಷ ಕೆ.ಜಿ. ಶಿವಕುಮಾರ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಕನ್ನಡ ಪರ ಹೋರಾಟಗಾರ ನಾಗೇಂದ್ರ ಬಂಡೀಕರ್, ಅಖಂಡ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಕಾರ್ಯಾಧ್ಯಕ್ಷ ಎಸ್. ಜಿ. ಸೋಮಶೇಖರ್ , ಬಾಲ ಪ್ರತಿಭೆ ರಿತಾನ್ಯ, ಜಗಳೂರಿನ ಡಾ. ಅರವಿಂದನ್ ಕನ್ನಡ ನಾಡು, ನುಡಿ, ನೆಲ, ಜಲ, ಗಡಿ ಸಂರಕ್ಷಣೆ ಕುರಿತು ಮಾತನಾಡಿದರು.

ಅಖಂಡ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಬಿ.ಜಿ. ಅಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ಅತ್ಯುತ್ತಮ ಬಾಲ ನಟಿ ಪ್ರಶಸ್ತಿ ಪುರಸ್ಕೃತ ದಾವಣಗೆರೆಯ ನಮನ ಹಾಗೂ ಬಾಲ ಪ್ರತಿಭೆ ರಿತಾನ್ಯ, ನಿವೃತ್ತ ಶಿಕ್ಷಕಿ ಕಮಲಮ್ಮ ಅವರನ್ನು ಗೌರವಿಸಲಾಯಿತು.

ಕೆ. ಜೈಮುನಿ, ಕೆ.ಹೆಚ್. ರೇವಣಸಿದ್ಧಪ್ಪ, ಜಿ.ಹೆಚ್.ನಾಗರಾಜಪ್ಪ, ಎಸ್.ಮೋಹನ್, ಎಸ್. ಶ್ರೇಯಸ್, ಅವಿನಾಶ್ ವಿ. (ಅಭಿ), ನೌಷಿನ್ ತಾಜ್ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿದುಷಿ ಸಂಗಿತ ರಾಘವೇಂದ್ರ ನಾಡಗೀತೆ ಹಾಡಿದರು. ಗಂಗಾಧರ್ ಬಿ. ಎಲ್. ನಿಟ್ಟೂರು ನಿರೂಪಿಸಿದರು. ಮಹಾಂತೇಶ್ ನಿಟ್ಟೂರು ಸ್ವಾಗತಿಸಿದರು. ಫ್ರೆಂಡ್ಸ್ ಆರ್ಕೆಸ್ಟ್ರಾ ತಂಡದವರು ರಸಮಂಜರಿ ಕಾರ್ಯಕ್ರಮ ನಡೆಸಿಕೊಟ್ಟರು.

# ಮಸೀದಿ ಸಮೀಕ್ಷೆಗೆ ವಿರೋಧಿಸಿ ಹಿಂಸಾತ್ಮಕ ಪ್ರತಿಭಟನೆ ; ಮೂವರ ಸಾವು

ಸಂಭಲ್ (ಉತ್ತರ ಪ್ರದೇಶ), ನ. 24 – ಮುಘಲರ ಕಾಲದ ಮಸೀದಿಯೊಂದನ್ನು ಸಮೀಕ್ಷೆಗೆ ಒಳಪಡಿಸುವಂತೆ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ವಿರೋಧಿಸಿ ಪ್ರತಿಭಟನಾಕಾರರು ಹಿಂಸಾಚಾರ ನಡೆಸಿದಾಗ ಮೂವರು ಸಾವನ್ನಪ್ಪಿದ್ದಾರೆ ಹಾಗೂ 20ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ.

ಪೊಲೀಸರ ಕಡೆ ಕಲ್ಲು ತೂರಾಟ ನಡೆಸಿದ ಗುಂಪು, ವಾಹನಗಳಿಗೆ ಬೆಂಕಿ ಹಚ್ಚಿತು. ಆಗ ಪೊಲೀಸರು ಗುಂಪು ಚೆದುರಿಸಲು ಅಶ್ರುವಾಯು ಸಿಡಿಸಿ ಲಾಠಿ ಪ್ರಹಾರ ನಡೆಸಿದರು.

ದುಷ್ಕರ್ಮಿಗಳು ಪೊಲೀಸರ ಮೇಲೆ ಗುಂಡು ಹಾರಿಸಿದ್ದಾರೆ. ಆಗ ಪೊಲೀಸ್ ವರಿಷ್ಠಾಧಿಕಾರಿಯ ಪಿ.ಆರ್.ಓ. ಕಾಲಿಗೆ ಗಾಯಗಳಾಗಿವೆ ಎಂದು ಮೊರಾದಾಬಾದ್ ವಿಭಾಗೀಯ ಆಯುಕ್ತ ಆಂಜನೇಯ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಪೇದೆಯೊಬ್ಬರ ತಲೆಗೆ ಗಂಭೀರ ಗಾಯಗಳಾಗಿವೆ. ಉಪ ವಿಭಾಗಾಧಿಕಾರಿ ಕಾಲಿಗೆ ಗಾಯವಾಗಿದೆ ಎಂದವರು ತಿಳಿಸಿದ್ದಾರೆ.

ಘಟನೆಯ ಹಿನ್ನೆಲೆಯಲ್ಲಿ ಸಂಭಲ್ ತಾಲ್ಲೂಕಿನಲ್ಲಿ ಇಂಟರ್‌ನೆಟ್ ಸೌಲಭ್ಯವನ್ನು ಕಡಿತಗೊಳಿಸಲಾಗಿದೆ. ಪರಿಸ್ಥಿತಿ ಈಗ ನಿಯಂತ್ರಣದಲ್ಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜಾಮಾ ಮಸೀದಿಯ ಜಾಗದಲ್ಲಿ ಹರಿಹರ ದೇವಾಲಯವಿದೆ ಎಂದು ಸ್ಥಳೀಯ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಸಮೀಕ್ಷೆ ನಡೆಸಲು ಸ್ಥಳೀಯ ನ್ಯಾಯಾಲಯ ಆದೇಶ ಹೊರಡಿಸಿತ್ತು.

ಘರ್ಷಣೆಯಲ್ಲಿ ನಯೀಮ್, ಬಿಲಾಲ್ ಹಾಗೂ ನೌಮನ್ ಎಂಬುವವರು ಸಾವನ್ನಪ್ಪಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಹತ್ತು ಜನರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಸರ್ವೆ ತಂಡ ಸ್ಥಳಕ್ಕೆ ತೆರಳಿತ್ತು. ಸರ್ವೆ ಕೆಲಸ ಶಾಂತವಾಗಿ ನಡೆಯುತ್ತಿತ್ತು. ಆದರೆ, ದೊಡ್ಡ ಗುಂಪೊಂದು ಅಲ್ಲಿ ಸೇರಿ ಘೋಷಣೆ ಕೂಗಲು ಆರಂಭಿಸಿತು. ಪೊಲೀಸರು ಜನರನ್ನು ಚೆದುರಿಸುವ ಪ್ರಯತ್ನ ನಡೆಸಿದರು. ಆಗ ಗುಂಪು ಕಲ್ಲು ತೂರಾಟ ನಡೆಸಿ ಹಿಂಸಾಚಾರ ಆರಂಭಿಸಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

## ತುಳಜಾ ಭವಾನಿ ದೇವಸ್ಥಾನದಲ್ಲಿ ಕಾರ್ತಿಕ ದೀಪೋತ್ಸವ



ದಾವಣಗೆರೆ, ನ. 24- ಇಲ್ಲಿನ ಕೆಟಿಜೆ ನಗರ 3ನೇ ಮುಖ್ಯರಸ್ತೆ, 11 ಮತ್ತು 12ನೇ ಕ್ರಾಸ್‌ನಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ಶ್ರೀ ತುಳಜಾ ಭವಾನಿ ಕಾರ್ತಿಕ ದೀಪೋತ್ಸವ ಕಾರ್ಯಕ್ರಮವು ಬರುವ ಡಿಸೆಂಬರ್ 20ರ ಶುಕ್ರವಾರ ಸಂಜೆ 7.15ಕ್ಕೆ ನಡೆಯಲಿದೆ.

## ನಗರದಲ್ಲಿ ಇಂದು ಪ್ರವಚನ



ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಇಂದಿನಿಂದ ಇದೇ ದಿನಾಂಕ 30 ವರೆಗೆ ಪ್ರತಿ ದಿನ ಸಂಜೆ 7 ಗಂಟೆಗೆ ಮುಂಡ ಗೋಡಿನ ಅತ್ತಿವೇರಿ ಶ್ರೀ ಬಸವೇಶ್ವರಿ ಮಾತಾಜಿ ಅವರಿಂದ ಪ್ರವಚನ ಏರ್ಪಡಿಸಲಾಗಿದೆ.

## ನಗರದಲ್ಲಿಂದು ನೀಲಕಂಠೇಶ್ವರ ಸ್ವಾಮಿ ಕಾರ್ತಿಕ



ಕೆಟಿಜೆ ನಗರ 2ನೇ ಮೇನ್, 14ನೇ ಕ್ರಾಸ್‌ನ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿಯ ಕಾರ್ತಿಕ ದೀಪೋತ್ಸವವು ಇಂದು ಸಂಜೆ 7.15ಕ್ಕೆ ನೆರವೇರಲಿದೆ ಎಂದು ಶ್ರೀ ಕುರುಹಿನ ಶೆಟ್ಟಿ ಸಮಾಜ ಸಂಘದ ಪ್ರಕಟಣೆ ತಿಳಿಸಿದೆ.







# ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ ಸುರೇಶ್ ವಿ. ಆರ್. ಬಿನ್ ದಿ|| ವಾಸುದೇವ್ ವಿ. ಆರ್., ವಾಸ: 91/24ಎ, ನೆಲಮಹಡಿ, 2ನೇ ಮೇನ್, ಡಿಸಿಎಂ ಕಾಲೋನಿ, ದಾವಣಗೆರೆ ಇವರು ನೀಡಿದ ಮಾಹಿತಿ ಮೇರೆಗೆ, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರ ಬಯಸುವ ಸಂಗತಿಗಳು ಏನೆಂದರೆ;

ಸದರಿ ನನ್ನ ಕಕ್ಷೀದಾರರ ಅಣ್ಣ ಶ್ರೀ ಗಣಪತಿ ವಾಸುದೇವ ರಾಯ್ಕರ್ ಬಿನ್ ದಿ|| ವಾಸುದೇವ್, ವಿ. ಆರ್. ಯವರ ತಂದೆ ತಮಗೆ ಸೇರಿದ ಮನೆ ನಂ. 538/1, 'ಲಕ್ಷ್ಮಿ', 5ನೇ ಮೇನ್, 7ನೇ ಅಡ್ಡರಸ್ತೆ, ಪಿ. ಜೆ. ಬಡಾವಣೆ, ದಾವಣಗೆರೆ ಸ್ವತ್ತನ್ನು ದಿನಾಂಕ 19-01-2023 ರಂದು ನನ್ನ ಕಕ್ಷಿದಾರರ ಹೆಸರಿಗೆ ನೋಂದಾಯಿತ ದಾನ ಪತ್ರದ ಮುಖೇನ ನೀಡಿರುತ್ತಾರೆ. ತದ ನಂತರ ಸದರಿ ಶ್ರೀ ಗಣಪತಿ ವಾಸುದೇವ್ ರಾಯ್ಕರ್ ಇವರು ಮಾನ್ಯ ಉಪ ನೋಂದಣಾಧಿಕಾರಿಗಳವರ ಕಛೇರಿಗೆ ಸುಳ್ಳು ಮಾಹಿತಿ ನೀಡಿ ಸಂ. ಹಿ. ನಾ/ಸಿಆರ್ /49/2023-24 ರಂತೆ ಪ್ರಕರಣ ದಾಖಲಿಸಿ, ನನ್ನ ಕಕ್ಷಿದಾರರಿಗೆ ಯಾವುದೇ ಸೂಚನಾ ಪತ್ರ ತಲುಪದಂತೆ ವ್ಯವಸ್ಥಿತವಾಗಿ ತಮ್ಮ ಸದರಿ ಪ್ರಕರಣದಲ್ಲಿ ತಮಗೆ ಅನುಕೂಲವಾಗುವ ಆದೇಶವನ್ನು ಪಡೆದುಕೊಂಡಿದ್ದು, ಸದರಿ ಆದೇಶದ ಪ್ರಕಾರ ಅವರ ಹೆಸರಿಗೆ ಖಾತೆ ಸಹ ವರ್ಗಾವಣೆಯಾಗಿರುತ್ತದೆ.

ಸದರಿ ಆದೇಶದ ಬಗ್ಗೆ ತಿಳಿದ ನನ್ನ ಕಕ್ಷಿದಾರರು, ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇವರಲ್ಲಿ W. P. NO. 28058/2024 ರಂತೆ ಪ್ರಕರಣ ದಾಖಲಿಸಿ, ಮಾನ್ಯ ಉಪ ವಿಭಾಗಾಧಿಕಾರಿಗಳು, ದಾವಣಗೆರೆ ಇವರು ಸಂ. ಹಿ. ನಾ/ಸಿಆರ್/49/2023-24 ರಲ್ಲಿ ಮಾಡಿರುವ ಆದೇಶಕ್ಕೆ ತಡೆಯಾಜ್ಞೆ ಪಡೆದಿರುತ್ತಾರೆ. ಸದರಿ ತಡೆಯಾಜ್ಞೆ ಹಾಲಿ ಚಾಲ್ತಿಯಲ್ಲಿರುತ್ತದೆ.

ವಾಸ್ತವತೆ ಹೀಗಿರುವಾಗ್ಗೆ, ಮೇಲೆ ಹೇಳಿದ ಶ್ರೀ ಗಣಪತಿ ವಾಸುದೇವ ರಾಯ್ಕರ್ ಬಿನ್ ದಿ|| ವಾಸುದೇವ್ ವಿ. ಆರ್. ಇವರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕೆಲ ಸೃಷ್ಟಿತ ದಾಖಲೆಗಳನ್ನು ಬಳಸಿ ಖಾಸಗಿ ವ್ಯಕ್ತಿಗಳೊಂದಿಗೆ ಹಾಗೂ ಬ್ಯಾಂಕ್ (ಹಣಕಾಸು ಸಂಸ್ಥೆಗಳೊಂದಿಗೆ) ವಹಿವಾಟು ನಡೆಸಲು ಪ್ರಯತ್ನಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಹಾಗೂ ಬ್ಯಾಂಕ್ (ಹಣಕಾಸು ಸಂಸ್ಥೆ)ಗಳಿಗೆ ಈ ಮೂಲಕ ತಿಳಿಯಪಡಿಸುವುದೇ ನೆಂದರೆ, ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾರೂ ಮೇಲೆ ಹೇಳಿದ ಶ್ರೀ ಗಣಪತಿ ವಾಸುದೇವ ರಾಯ್ಕರ್ ಬಿನ್ ದಿ|| ವಾಸುದೇವ್. ವಿ. ಆರ್. ಇವರೊಂದಿಗೆ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದು. ಈ ಸಾರ್ವಜನಿಕ ಸೂಚನೆಯ ಹೊರತಾಗಿಯೂ ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಅದು ಅಸಿಂಧುವಾಗುತ್ತದೆಯಲ್ಲದೇ, ನನ್ನ ಕಕ್ಷಿದಾರರಿಗೆ ಹಾಗೂ ಅವರಿಗೆ ಷೆಡ್ಯೂಲ್ ಸೊತ್ತಿನಲ್ಲಿ ಇರತಕ್ಕ ಹಕ್ಕಿಗೆ ಸದರಿ ವ್ಯವಹಾರ ಯಾವುದೇ ರೀತಿಯಲ್ಲಿ ಬಾಧಕವಾಗುವುದಿಲ್ಲ ಹಾಗೂ ಅಂತಹ ವ್ಯವಹಾರ ಕಾನೂನಿನಡಿಯಲ್ಲಿ ಊರ್ಜಿತವಾಗತಕ್ಕದ್ದಲ್ಲ.

**ಷೆಡ್ಯೂಲ್**

ದಾವಣಗೆರೆ ಸಬ್ ರಿಜಿಸ್ಟ್ರಾರ್ ರವರ ಅಧಿಕಾರಕ್ಕೆ ಒಳಪಟ್ಟು, ದಾವಣಗೆರೆ ಸಿಟಿ, ಪಿಜೆ ಬಡಾವಣೆಯ 5ನೇ ಮೇನ್, 7ನೇ ಅಡ್ಡರಸ್ತೆಯಲ್ಲಿನ 'ಲಕ್ಷ್ಮಿ', ಮನೆ ನಂ. 538/1, ಉಳ್ಳ ಮನೆ ಇದ್ದು ಸದರಿ ಸ್ವತ್ತಿಗೆ ಚಕ್ಕುಬಂದಿ:

ಪೂರ್ವ : 5ನೇ ಮುಖ್ಯರಸ್ತೆ — ಪಶ್ಚಿಮ : ಕನ್ಸರ್ವೆನ್ಸಿ

ಉತ್ತರ : ಶ್ರೀ ಪ್ರಾಣೇಶ್ ರಾವ್ ಇವರ ಮನೆ — ದಕ್ಷಿಣ : ಶ್ರೀ ಶೆಟ್ಟರ್ ಇವರ ಮನೆ

ಸಹಿ/- ಕೆ. ಜಿ. ಕೆ ಸ್ವಾಮಿ,
ಎಸ್. ಜಿ. ಮಹವೀರ್,
ನ್ಯಾಯವಾದಿಗಳು, 'ಲಾ ಸಲ್ಯೂಷನ್', ನಂ. 417/4ಎ, 4ಬಿ, 1ನೇ ಮಹಡಿ,
ಜನತಾವಾಣಿ ಕಛೇರಿ ಎದುರು, ದಿಕ್ಷೀತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ
ಮೊ: 98444 13266, 98450 03326



# ಅಭಿನಂದನೆಗಳು



ಆಂಗ್ಲಭಾಷಾ ಉಪನ್ಯಾಸಕರಾಗಿ ಸುಮಾರು 35 ವರ್ಷಗಳ ಕಾಲ ಸೇವೆ ಸಲ್ಲಿಸಿ, ಜೊತೆಗೆ ಸಮಾಜ ಸೇವೆಯಲ್ಲಿ ತೊಡಗಿರುವ **ಪ್ರೊ.ದ್ಯಾಮಪ್ಪ** ಇವರನ್ನು ಕರ್ನಾಟಕ ಸರ್ಕಾರದಿಂದ ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿರುತ್ತಾರೆ.
ಇವರಿಗೆ ನಮ್ಮ ಹೃದಯಪೂರ್ವಕ ಅಭಿನಂದನೆಗಳು.

**ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ, ಕಸ್ತೂರಬಾ ಪದವಿ ಪೂರ್ವ ಕಾಲೇಜು, ದಾವಣಗೆರೆ**


## ಮಿಸ್ಟರ್ ದಾವಣಗೆರೆ ಯೂನಿವರ್ಸಿಟಿ, ಬೆಸ್ಟ್ ಲಿಫ್ಟರ್ ಆಫ್ 2024'

ದಾವಣಗೆರೆ, ನ. 24 - ದಾವಣಗೆರೆ ವಿಶ್ವವಿದ್ಯಾನಿಲಯದ ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಚಾಣಕ್ಯ ಪ್ರಥಮ ದರ್ಜೆ ವಾಣಿಜ್ಯ ಮಹಾವಿದ್ಯಾಲಯದ



ಅಂತಿಮ ಬಿಕಾಂ ವಿದ್ಯಾರ್ಥಿ ವಿಕಾಸ್ ಎಲ್.ಎ. ಅವರು 89 ಕೆಜಿ ವಿಭಾಗದಲ್ಲಿ ಒಟ್ಟು 200 ಕೆಜಿ ಭಾರವನ್ನು ಎತ್ತುವುದರ ಮೂಲಕ ಪ್ರಥಮ ಸ್ಥಾನ ಪಡೆದು 'ಮಿಸ್ಟರ್ ದಾವಣಗೆರೆ ಯೂನಿವರ್ಸಿಟಿ, ಬೆಸ್ಟ್ ಲಿಫ್ಟರ್ ಆಫ್ 2024' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಮೂಲಕ ರಾಷ್ಟ್ರ ಮಟ್ಟದ ವೈಟ್ ಲಿಫ್ಟಿಂಗ್ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

## ಅದಾನಿ ವಿರುದ್ಧ ತನಿಖೆ: ಸುಪ್ರೀಂನಲ್ಲಿ ಅರ್ಜಿ ದಾಖಲು

ನವದೆಹಲಿ, ನ. 24 – ಉದ್ಯಮಿ ಗೌತಮ್ ಅದಾನಿ ವಿರುದ್ಧ ಅಮೆರಿಕದಲ್ಲಿ ಲಂಚ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ, ಅವರ ವಿರುದ್ಧ ತನಿಖೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿದೆ. ಅದಾನಿ - ಹಿಂಡನ್‌ಬರ್ಗ್ ವಿವಾದದ ಕುರಿತು ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್ ಪೀಠದ ಎದುರು ವಕೀಲ ವಿಶಾಲ್ ತಿವಾರಿ ಅವರು ಅರ್ಜಿ ದಾಖಲಿಸಿದ್ದಾರೆ. ಹಿಂಡನ್‌ಬರ್ಗ್ ವರದಿಯ ನಂತರ ಅದಾನಿ ಷೇರುಗಳಲ್ಲಿ ತೀವ್ರ ಕುಸಿತವಾಗಿದ್ದ ಹಿನ್ನೆಲೆಯಲ್ಲಿ ಅಕ್ರಮ ನಡೆದಿದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಈ ಹಿಂದೆ ಅರ್ಜಿ ದಾಖಲಿಸಲಾಗಿತ್ತು.

ಸೌರ ವಿದ್ಯುತ್ ಖರೀದಿಗೆ ಸಂಬಂಧಿಸಿದಂತೆ ಗೌತಮ್ ಅದಾನಿ ಮತ್ತಿತರರು 2,200 ಕೋಟಿ ರೂ.ಗಳ ಲಂಚ ನೀಡಿದ್ದಾರೆ ಎಂದು ಅಮೆರಿಕದಲ್ಲಿ ಪ್ರಕರಣ ದಾಖಲಿಸಲಾಗಿದೆ.


# ಹಾರ್ದಿಕ ಅಭಿನಂದನೆಗಳು



ದಿನಾಂಕ: 22–11–2024ರ ಶುಕ್ರವಾರದಂದು ದಾವಣಗೆರೆಯಲ್ಲಿ ನಡೆದ **ಸಹಕಾರ ಭಾರತಿಯ** 7ನೇ ರಾಜ್ಯ ಸಹಕಾರಿ ಸಮಾವೇಶದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ

**ಶ್ರೀಯುತ ಪ್ರಭುದೇವ್ ಆರ್ ಮಾಗನೂರು**

ಇವರು ಮುಂದಿನ ಮೂರು ವರ್ಷಗಳ ಅವಧಿಗೆ **ಸಹಕಾರ ಭಾರತಿ ಕರ್ನಾಟಕ** ಇದರ **ರಾಜ್ಯಾಧ್ಯಕ್ಷರಾಗಿ** ಅವಿರೋಧವಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವ ಇವರಿಗೆ ಹಾರ್ದಿಕ ಅಭಿನಂದನೆಗಳು.

**ಶುಭ ಕೋರುವವರು**

**ಸಹಕಾರ ಭಾರತಿ ರಾಜ್ಯ ಸಹಕಾರಿ ಸಮಾವೇಶದ ಸ್ವಾಗತ ಸಮಿತಿ ಸದಸ್ಯರು**

ಗೌರವಾಧ್ಯಕ್ಷರು: ಜಿ.ನಂಜನಗೌಡ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಉಪಾಧ್ಯಕ್ಷರುಗಳು: • ಜಿ.ಎನ್.ಸ್ವಾಮಿ, • ದೇವರಮನೆ ಶಿವಕುಮಾರ್, • ಆರ್.ಎಂ.ರವಿ, • ಯಶವಂತ್‌ರಾವ್ ಜಾದವ್, • ಹೆಚ್.ಎಸ್.ಶಿವಕುಮಾರ್, • ಬಿ.ಶೇಖರಪ್ಪ, • ಬಿ.ಕೆ.ಶಿವಕುಮಾರ್, • ಸಿಎ.ಉಮೇಶ್ ಶೆಟ್ಟಿ, • ಎಂ.ವಿ.ಅಣ್ಣೇಶ್.

ಪ್ರಧಾನ ಕಾರ್ಯದರ್ಶಿ: • ಎಸ್.ಟಿ.ವೀರೇಶ್,

ಖಜಾಂಚಿ: • ಮುರುಗೇಶ್ ಆರಾಧ್ಯ

ಕಾರ್ಯದರ್ಶಿಗಳು: • ಕೆ.ಪರಶುರಾಮ್, • ವೈ.ಬಿ.ನಾಗರಾಜ್, • ಇಂಧೂದರ್ ಎನ್.ರುದ್ರಗೌಡ ಜಿಗಳಿ, • ನರಸಿಂಹಪ್ಪ, • ಜೆ.ಓಂಕಾರೇಶ್ವರ ಗೌಡ, • ಎಸ್.ಎಂ.ಶಿವಕುಮಾರ ಸ್ವಾಮಿ, • ಎಸ್.ರಮೇಶ್.

ಸದಸ್ಯರು: • ಡಿ.ಎಂ.ಶಿವಕುಮಾರ್, • ವಿನಾಯಕ ರಾನಡೆ, • ಗೌತಮ್ ಜೈನ್, • ಹೆಚ್.ಇಂದ್ರಪ್ಪ, • ರುದ್ರೇಗೌಡ್ರು • ರವಿ ಕೆ.ಪಿ.ಆರ್, • ಗೋಪನಾಳ ಪಾಲಾಕ್ಷಿ, • ಮಂಜಣ್ಣ, • ಕೆ.ಜಿ.ಸಂತೋಷ್, • ಜಿ.ಜಯಣ್ಣ, • ಶಿವಲಿಂಗಪ್ಪ, • ರಾಮಚಂದ್ರಪ್ಪ ಬೆಳ್ಳೂಡಿ.

ಮಹಿಳಾ ಪ್ರಮುಖ್: • ಶ್ರೀಮತಿ ಕೆ.ಎಂ.ಲತಾ, • ಕುಮಾರಿ ಹೆಚ್.ಎನ್.ಪ್ರಿಯಾಂಕ, • ಶ್ರೀಮತಿ ಇ.ಸೌಮ್ಯ, • ಶ್ರೀಮತಿ ಕೆ.ಹೆಚ್.ರುದ್ರಮ್ಮ.

**ಸಹಕಾರ ಭಾರತಿಯ ರಾಷ್ಟ್ರ ಹಾಗೂ ರಾಜ್ಯ ನಾಯಕರು & ಪದಾಧಿಕಾರಿಗಳು**

ದಾವಣಗೆರೆ ಎಲ್ಲಾ ಸಹಕಾರಿಗಳು



# ಹಾರ್ದಿಕ ಅಭಿನಂದನೆಗಳು



ದಿನಾಂಕ: 22-11-2024ರ ಶುಕ್ರವಾರದಂದು ದಾವಣಗೆರೆಯಲ್ಲಿ ನಡೆದ ಸಹಕಾರ ಭಾರತಿಯ 7ನೇ ರಾಜ್ಯ ಅಧಿವೇಶನದಲ್ಲಿ ನಮ್ಮ ಸಹಕಾರಿ ಜಿ.ಎಂ.ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಮಂಡಿಪೇಟೆ ದಾವಣಗೆರೆ ಇದರ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಮಹಾ ಮಂಡಲ ಬೆಂಗಳೂರು ಇದರ ನಿರ್ದೇಶಕರಾದ

**ಶ್ರೀಯುತ ಪ್ರಭುದೇವ್ ಆರ್ ಮಾಗನೂರು**

ಇವರು ಮುಂದಿನ ಮೂರು ವರ್ಷಗಳ ಅವಧಿಗೆ ಸಹಕಾರ ಭಾರತಿ ಕರ್ನಾಟಕ ಇದರ **ರಾಜ್ಯಾಧ್ಯಕ್ಷರಾಗಿ** ಅವಿರೋಧ ಆಯ್ಕೆಯಾಗಿರುವ ಇವರಿಗೆ ಹಾರ್ದಿಕ ಅಭಿನಂದನೆಗಳು.

**ಶ್ರೀ ಪ್ರಭುದೇವ್ ಆರ್ ಮಾಗನೂರು**

**ಶುಭ ಕೋರುವವರು**

**ಜಿಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ**

ಆಡಳಿತ ಕಛೇರಿ: #652, ಸೂರಜ್ ಆರ್ಕೇಡ್, ಮಂಡಿಪೇಟೆ, ದಾವಣಗೆರೆ–01.

ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಶಾಖೆಗಳ ಸಲಹಾ ಸಮಿತಿ ಸದಸ್ಯರುಗಳು, ಪ್ರಧಾನ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗದವರು.



# ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ತಿಮ್ಮರಾಜ್ ಎಲ್.ಜೆ. ಅಂಗಡಿ**

(ದಾವಣಗೆರೆ ಸಿಟಿ, ಡಿ.ಸಿ.ಎಂ. ಲೇಔಟ್ ವಾಸಿ ಎಲ್.ಟಿ. ಜಗನ್ನಾಥ್ ಶ್ರೀಮತಿ ಎಲ್.ಜೆ. ಸರೋಜಮ್ಮನವರ ಪುತ್ರ)

ಇವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

♦ ಹೆಚ್.ಎಸ್. ನಾಗರಾಜ್, ಕಾಂಗ್ರೆಸ್ ಮುಖಂಡರು ♦ ಆನಂದಪ್ಪ ಎಸ್.ಎಲ್., ಕೆಪಿಸಿಸಿ ಕೋ ಆರ್ಡಿನೇಟರ್
♦ ಅಮರೇಶ ಗಟ್ಟಿಗನೂರು ♦ ಅಕ್ಕಿ ರಾಮಚಂದ್ರ ಹೆಚ್., ಜಿಲ್ಲಾ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿ
♦ ಸುರೇಶ ಕೋಗುಂಡೆ, ಜಿಲ್ಲಾ ಕಾಂಗ್ರೆಸ್ ಮಾಧ್ಯಮ ಪ್ರಮುಖ ♦ ಎಂ.ಟಿ. ನಾಗರಾಜ
♦ ಗಿರೀಶ್ ಯು. ವಸಂತ ಸ್ಟೋನ್ ♦ ಎರ್ರಿಸ್ವಾಮಿ ♦ ಎಸ್. ದುಗ್ಗಪ್ಪ
♦ ಹೆಚ್.ಹೆಚ್. ಕುಮಾರಸ್ವಾಮಿ ಹಿರೇಬಿದರಿ ♦ ಅಜ್ಜಪ್ಪ ♦ ಅಕ್ಷಯ್ ಕಡಕೋಳ

ಕಿತ್ತೂರು ರಾಣಿ ಚನ್ನಮ್ಮ ಪ್ರತಿಷ್ಠಾನದ ಪದಾಧಿಕಾರಿಗಳಾದ:

♦ ಹೆಚ್. ಜಯಪ್ಪ ♦ ಕೆ.ಎಸ್. ಗಂಗಾಧರ ♦ ಬಿ.ವಿ. ರಾಜಶೇಖರ
♦ ವಿ. ಶಿವಮೂರ್ತಿ ಸ್ವಾಮಿ ♦ ಮಲ್ಲಿಕಾರ್ಜುನ ಕಟ್ಟಿಮನೆ ♦ ಹಾಲೇಶ ಕಾಯಿಪೇಟೆ
♦ ಡೋಲಿ ಚಂದ್ರು ♦ ಚಿರಂತಿಮಠ ♦ ಎಸ್.ಜಿ. ಸಂಗಪ್ಪ
♦ ಎಂ.ಎನ್. ಪ್ರಭುಕುಮಾರ್ ಗೌಡ್ರು ♦ ಅಣಜಿ ಪ್ರಶಾಂತ ಶೆಟ್ರು


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas